

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 27 | ಏಪ್ರಿಲ್-ಜೂನ್ 2014 | ರೂ. 10/= | ಸಂಚಿಕೆ 01

## ವಸಂತ ಸಂಭ್ರಮ








### ಗಮನಿಸಿ :

ದೀಪ ದುರ್ಗಾ ನಮಸ್ಕಾರ - 27.7.2014

ಮಕ್ಕಳ ಪ್ರತಿಭಾ ಸ್ಪರ್ಧೆ - 3.8.2014

ಮಕ್ಕಳೊಂದಿಗೊಂದು ಸಂಜೆ - 31.8.2014

ಗಣೇಶೋತ್ಸವ - 7.9.2014

ವಾರ್ಷಿಕ ಮಹಾಸಭೆ - 21.9.2014

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 27 ಸಂಚಿಕೆ 01

ಅಧ್ಯಕ್ಷರು :
ಪಿ.ಎಸ್. ಬಾಗಿಲ್ತಾಯ

ಕಾರ್ಯದರ್ಶಿ :
ವೈ. ರಾಧಾಕೃಷ್ಣ

ಸಂಪಾದಕರು :
ಎಸ್. ಹರಿದಾಸ ಉಪಾಧ್ಯ

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಎಂ. ಸತ್ಯನಾರಾಯಣ ಭಟ್
ಬಿ. ರಾಮದಾಸ ತಂತ್ರಿ
ಕೆ.ಎನ್. ಅಡಿಗ
ಡಿ. ಶರತ್ ಕುಮಾರ ಭಟ್
ರಂಜಿತ್ ಯಡಪಾಡಿತ್ತಾಯ
ಟಿ.ಎಸ್. ನಾಗರಾಜ ಉಪಾಧ್ಯಾಯ

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ
ಮಟ್ಟಿ ರಾಮಚಂದ್ರ ರಾವ್

ವಿಳಾಸ :
ಆನಂದ ಬಳಗ
ಜೀವನ್ ಬಿಲ್ಡಿಂಗ್
11, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು - 560 001
ಟೆಲಿಫ್ಯಾಕ್ಸ್ : 41138879

Website:
www.anandabalaga.org

# ಸಂಪಾದಕೀಯ

ಸಹೃದಯ ಓದುಗರೇ,

ಭೃಗುವಾಣಿಯ ಸಂಪಾದಕ / ಸಂಪಾದಕ ಮಂಡಳಿಯವರ ಅನಿಸಿಕೆಗಳು ಸದಸ್ಯರ ಅನಿಸಿಕೆಗಳಿಗಿಂತ ಭಿನ್ನವಾಗಿಲ್ಲ ಎಂಬ ಕಾರಣಕ್ಕೊ ಏನೋ ಪ್ರಾಯಶಃ ಭೃಗುವಾಣಿಯಲ್ಲಿ ಸಂಪಾದಕರ ನುಡಿಗಳನ್ನು ಪ್ರಕಟಿಸುವುದು ರೂಢಿಯಾಗಿ ಬಂದಿಲ್ಲ. ಆದರೆ ಆಗೊಮ್ಮೆ ಈಗೊಮ್ಮೆ ಈ ಶೀರ್ಷಿಕೆಯನ್ನು ನೋಡಿ ಓದುಗರು ಅಚ್ಚರಿಗೊಳ್ಳಬಹುದು. ಕಾರಣವಿಷ್ಟೆ - ಸಂಪಾದಕರು / ಸಂಪಾದಕ ಮಂಡಳಿಯ ಸದಸ್ಯರು ಬದಲಾಗುವ ಸಂದರ್ಭದಲ್ಲಿ ಈ ಶೀರ್ಷಿಕೆಯ ಆವಶ್ಯಕತೆ ಕಂಡು ಬಂದು ಇದಕ್ಕೊಂದು ಪುಟ ಮೀಸಲಾಗಿರಿಸುತ್ತದೆ.


ಮುಂದಿನ ಎರಡುವರ್ಷಗಳ ಕಾಲಾವಧಿಯಲ್ಲಿ ಭೃಗುವಾಣಿಯ ಪ್ರಕಟಣೆಯನ್ನು ನಿರ್ವಹಿಸುವ ಜವಾಬ್ದಾರಿಯನ್ನು ನಮ್ಮ ತಂಡಕ್ಕೆ ಒಪ್ಪಿಸಿದುದು ಈಗಾಗಲೇ ಓದುಗರ ಗಮನಕ್ಕೆ ಬಂದಿರಬಹುದು. ನಮ್ಮ ತಂಡದ ಮೇಲಿಟ್ಟ ಈ ಭರವಸೆಗೆ ನಾವೆಲ್ಲಾ ಚಿರಋಣಿಗಳು. ತಮ್ಮೆಲ್ಲರ ನಿರೀಕ್ಷೆಗೆ ತಕ್ಕುದಾದ ಪತ್ರಿಕೆಯನ್ನು ಹೊರತರುವುದು ಸಂಪಾದಕ ಮಂಡಳಿಯ ಬಯಕೆ ಹಾಗೂ ಜವಾಬ್ದಾರಿಯೂ ಹೌದು. ಈ ತನಕದ ಸಂಪುಟಗಳ ಮಟ್ಟಕ್ಕಿಂತ ಉತ್ತಮವಲ್ಲದಿದ್ದರೂ ಆಮಟ್ಟವನ್ನಾದರೂ ಕಾಯ್ದುಳಿಸಬೇಕೆಂಬುದು ನಮ್ಮ ಪ್ರಾಮಾಣಿಕ ಬಯಕೆ. ಆದರೆ ಇವುಗಳೆಲ್ಲಾ ಸಾಕ್ಷಾತ್ಕಾರವಾಗಬೇಕಾದರೆ ತಮ್ಮೆಲ್ಲರ ಸಹಕಾರ ಅತ್ಯಗತ್ಯ. ಹಿರಿಯರ ಮಾರ್ಗದರ್ಶನ ಉಪಸಮಿತಿಗಳ ಸಹಕಾರ, ಓದುಗರ ಸಕಾರಾತ್ಮಕ ಸ್ಪಂದನೆ ಪತ್ರಿಕೆಯ ಬೆನ್ನೆಲುಬು. ಕಥೆ ಕವನಗಳು, ಪ್ರವಾಸಕಥನಗಳು ನಮ್ಮೂರ ಹಬ್ಬ ಹರಿದಿನಗಳು' ನಮ್ಮ ಆಚಾರವಿಚಾರಗಳು, ನಮ್ಮೂರ ಸ್ಥಳವಿಶೇಷಗಳು ಇತ್ಯಾದಿ ವಿಷಯಗಳಲ್ಲಿ ವಿಚಾರ ಪೂರಿತ ಲೇಖನಗಳಿಗೆ ಭೃಗುವಾಣಿಯಲ್ಲಿ ಸದಾ ಅವಕಾಶ ಇದೆ. ಹವ್ಯಾಸೀ ಬರಹಗಾರರು ಉತ್ತಮ ಮಟ್ಟದ ಲೇಖಕರಾಗಲು ಇದೊಂದು ಸದವಕಾಶ. ಈ ಅವಕಾಶವನ್ನು ಅರ್ಥವತ್ತಾಗಿ ಓದುಗರು ಉಪಯೋಗಿಸಿಕೊಳ್ಳಬೇಕಾಗಿ ನಮ್ಮ ಪ್ರಾರ್ಥನೆ.

ಬಳಗದ ಯಾವತ್ತೂ ವಿಚಾರಗಳನ್ನು ಸರ್ವಸದಸ್ಯರಿಗೆ ತಲುಪಿಸುವ ನಿಟ್ಟಿನಲ್ಲಿ ಭೃಗುವಾಣಿಯ ಜವಾಬ್ದಾರಿಯು ಗುರುತರವಾದುದು. ಈ ದಿಸೆಯಲ್ಲಿ ಮುಂಬರುವ ದಿನಗಳಲ್ಲಿ ಭೃಗುವಾಣಿಯಲ್ಲಿ ಕನ್ನಡ ಮತ್ತು ಆಂಗ್ಲಭಾಷೆಯ ಲೇಖನಗಳನ್ನು ಪ್ರಕಟಿಸಬೇಕೆಂಬುದು ನಮ್ಮೆಲ್ಲರ ಆಶಯ. ಈ ನಿಟ್ಟಿನಲ್ಲಿ ಈಗಾಗಲೇ ಕಾರ್ಯೋನ್ಮುಖ ವಾಗಿರುವುದು ಸಂತೋಷದ ವಿಚಾರ. ಜಾಗತೀಕರಣದ ಇಂದಿನ ಈ ವಾತಾವರಣದಲ್ಲಿ ಇತರ ಪ್ರಾಂತ್ಯಗಳಲ್ಲಿ ವಿದ್ಯಾಭ್ಯಾಸ ನಡೆಸಿ ಬೆಂಗಳೂರಲ್ಲಿ ಬಂದು ನೆಲಸಿದ ಹಾಗೂ ಅನಿವಾರ್ಯ ಕಾರಣಗಳಿಂದಾಗಿ ಆಂಗ್ಲಭಾಷೆಯಲ್ಲೇ ವಿದ್ಯಾಭ್ಯಾಸ ನಡೆಸಿದ ನಮ್ಮ ಓದುಗರ ಉಪಯೋಗಕ್ಕಾಗಿ ಈ ಹೆಜ್ಜೆ ಅವಶ್ಯ ಎಂದು ನಮಗರಿವಾಗಿದೆ.

ಓದುಗರು ಸಕಾಲಿಕ ಸಲಹೆಗಳಿಗೆ (ಕನ್‌ಸ್ಟ್ರಕ್ಟೀವ್ ಕ್ರಿಟಿಸಿಮ್) ಸದಾ ಸ್ವಾಗತವಿದೆ. ಓದುಗರೆಲ್ಲರೂ ನಮ್ಮೊಂದಿಗೆ ಕೈಜೋಡಿಸಿ ಪತ್ರಿಕೆ ಯನ್ನು ಕ್ಲಿಪ್ತ ವೇಳೆಯಲ್ಲಿ ಹೊರತರಲು ಸಹಕರಿಸಿ ಇನ್ನಷ್ಟು ಆಕರ್ಷಕವಾಗಿಸುವ ಸಾಲು ಪ್ರಯತ್ನದಲ್ಲಿ ನಮ್ಮೊಂದಿಗಿರುವಿರೆಂಬ ಆಶಯದೊಂದಿಗೆ

ಇಂತಿ ತಮ್ಮವ

(ಯಸ್. ಹರಿದಾಸ ಉಪಾಧ್ಯ)
ಸಂಪಾದಕ



## ಅಧ್ಯಕ್ಷರ ಮಾತು

ಭೃಗುವಾಣಿಯ ಎಲ್ಲಾ ಓದುಗರಿಗೂ ಶುಭಾಶಯಗಳು. 2014-16ನೇ ಸಾಲಿನ ಎರಡು ವರ್ಷದ ಅವಧಿಗೆ ನನ್ನನ್ನು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಪುನರಾಯ್ಕೆ, ಮಾಡಿರುವುದಕ್ಕೆ ಕೃತಜ್ಞತೆಗಳು. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಬಳಗದ ಸರ್ವತೋಮುಖ ಅಭಿವೃದ್ಧಿಗಾಗಿ ವಿದ್ಯಾ ಸಹಾಯ ನಿಧಿಯೇ ಇತ್ಯಾದಿ ಕಾರ್ಯಕ್ರಮಗಳನ್ನು ರೂಪಿಸಿ ಸಾಕಷ್ಟು, ನಿಧಿಯನ್ನು ಕ್ರೋಢಿಕರಿಸುವಲ್ಲಿ ಬಳಗದ ಸದಸ್ಯರು, ಅಭಿಮಾನಿಗಳು ಸಹಾಯಹಸ್ತ ನೀಡಿದ್ದಾರೆ.

ಆರ್ಥಿಕವಾಗಿ ಆನಂದ ಬಳಗವನ್ನು ಸುಭದ್ರವಾಗಿಸಬೇಕೆಂಬುದೇ ನಮ್ಮೆಲ್ಲರ ಬಯಕೆ. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಸದಸ್ಯರ ನಿರೀಕ್ಷೆಗಳಿಗೆ ಸ್ಪಂದಿಸುವ ಹಂಬಲ ನಮ್ಮದು. ಸದಸ್ಯರ ಸಹಾಯ ಬಹಳಷ್ಟು ಹರಿದು ಬಂದಿದೆ. ಬಳಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ನುರಿತ ಪರಿಣತರಿದ್ದಾರೆ. ವಿವಿಧ ಹುದ್ದೆಗಳನ್ನು ಅಲಂಕರಿಸಿದ ಅಪಾರ ಜ್ಞಾನವಂತರಿದ್ದಾರೆ. ಇಂತಹ  ಜ್ಞಾನವನ್ನು ನಮ್ಮ ಸಮಾಜದ ಯುವಪೀಳಿಗೆಗೆ ನೀಡುವಲ್ಲಿ ನಮ್ಮ ಪ್ರಯತ್ನ ಸಾಗಬೇಕಾಗಿದೆ. ಬಳಗದ ಇಪ್ಪತ್ತಾರು ವರ್ಷಗಳಲ್ಲಿ ಅನೇಕ ಕಾರ್ಯಕ್ರಮಗಳು ಅನುಷ್ಠಾನಕ್ಕೆ ಬಂದಿವೆ. ಆದರೆ ಇನ್ನೂ ಹೊಸ ವಿನೂತನ ಕಾರ್ಯಕ್ರಮಗಳ ಅವಶ್ಯಕತೆ ಇದೆ. ಈ ದಿಸೆಯಲ್ಲಿ ನಮಗೆ ಸದಸ್ಯರ ಸಲಹೆಗಳಿಗೆ ಅಗತ್ಯವಿದೆ. ಎಲ್ಲಾ ಸದಸ್ಯರು ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕಾಗಿದೆ. ಬದಲಾಗುತ್ತಿರುವ ಜೀವನ ಶೈಲಿಯಲ್ಲಿ ನಮ್ಮ ಆಚಾರ ವಿಚಾರಗಳನ್ನು ಉಳಿಸಿಕೊಳ್ಳುವ ಅವಶ್ಯವಿದೆ. ಸಮಾಜದಲ್ಲಿ  ಕ್ಷೀಣಿಸುತ್ತಿರುವ ನೈತಿಕತೆಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿರುವ ಸಮಯ ಇದಾಗಿದೆ. ಈ ನಿಟ್ಟಿನಲ್ಲಿ ಆನಂದ ಬಳಗವು ಯಾವ ರೀತಿಯ ಕೊಡುಗೆಯನ್ನು ನೀಡಬಹುದೆಂದು ಯೋಚಿಸಬೇಕಾಗಿದೆ. ಇವೆಲ್ಲಾ  ಕಾರ್ಯಕ್ರಮಗಳನ್ನು ಮುಂದಿನ ಅವಧಿಯಲ್ಲಿ ಯಾವ ರೀತಿಯಲ್ಲಿ ರೂಪಿಸಬಹುದೆಂದು ತಮ್ಮೆಲ್ಲರ ಅಭಿಪ್ರಾಯಗಳನ್ನು ಕೋರುತ್ತಿದ್ದೇವೆ.

ಹಾರ್ದಿಕ ಶುಭಾಶಯಗಳೊಂದಿಗೆ,

**ಪಿ.ಎಸ್.ಬಾಗಿಲ್ತಾಯ**
ಅಧ್ಯಕ್ಷರು, ಆನಂದಬಳಗ

## Executive Committee Members : 2014-2016

| Name | Contact Numbers |
|---|---|
| ***President*** | |
| P.S. Bagilthaya | 25259699 / 98440 83582 |
| ***Vice Presidents*** | |
| Smt. Geetha Vasudeva Rao | 22257111 / 98807 99997 |
| B. Ramachandra Upadhya | 22235533 / 99024 00072 |
| ***Secretary*** | |
| Y. Radhakrishna | 98440 58851 |
| ***Treasurer*** | |
| M.K. Gurumurthy | 22246304 / 98440 22692 |
| ***Adviser Committee*** | |
| Smt. Vijayalakshmi Bhat S. | 98441 52107 |
| ***Convener, Cultural Wing*** | |
| Dr. Veena Sharath | 99860 80271 |
| ***Convener, Religious Wing*** | |
| Jayanth Rao Y. | 23128448 / 94482 74519 |
| ***Convener, Youth Wing*** | |
| Sandeep A Rao | 98450 98150 |
| ***Convener, Edn. Assistance Program*** | |
| Sharat Chandra S.N. | 41138879 / 98860 40271 |
| ***Convener, Public Relations Wing*** | |
| Vishnumurthy P.N. Kuddannaye | 94803 05426 |
| ***Editor, Brugu Vani*** | |
| Haridasa S Upadhya | 26633867 / 94480 01892 |
| ***Convener, Membership Devt. Wing*** | |
| Adiga K.N. | 26390198 / 94488 48154 |
| ***Community Services*** | |
| Sathyaprakash Upadhya T.N | 98860 36338 |
| ***Members*** | |
| U.B. Venkatesh | 64530579 / 98453 37333 |
| Kasturi Aithal | 23228987 / 98803 98353 |
| Geetha P.R. Rao | 65968995 / 99459 38411 |
| ***Co-opted Members*** | |
| Dr. Mrs. Veena Sharath | 99860 80271 |
| Krishna Murthy U.V. | 23611133 / 26703072 |
| M. Bhaskar Rao | 2670957 / 26695752 |
| Sri T.N.S. Upadhya | 99860 36338 |
| H. Ramesh Bhat | |
| ***Past Presidents*** | |
| K.V.M. Yerkadithaya | 26631994 / 26633992 |
| S.T.R. Madi | 26583779 / 99029 77948 |
| U.A.P. Ballal | 22267609 |
| Padubidri Raghavendra Rao | 23348749 / 22872705 |
| K.Vasudeva Rao | 22257111 / 98450 57111 |
| ***Special Invitees*** | |
| M. Sathyanarayana Bhat | 26721269 / 99458 02607 |
| P.C. Rao | 22353749 / 98444 94630 |
| M. Mohan Rao | 98453 79955 |
| Jayaprakash S Mady | 98450 09669 |
| P. Ramdas | 98450 25896 |
| Smt. Sudha M. Rao | 2562436 / 99011 27738 |
| N.R. Narayana Rao | 22391380 |

## ಒಳಪುಟಗಳಲ್ಲಿ. . .


1. ಸಂಪಾದಕೀಯ ........ 1
2. ಅಧ್ಯಕ್ಷರ ಮಾತು ........ 2
3. ದೀಪದುರ್ಗಾ ನಮಸ್ಕಾರ ........ 4
4. ಪ್ರತಿಭಾ ಸ್ಪರ್ಧೆ ವಿವರಗಳು ........ 5
5. ಮಕ್ಕಳೊಂದಿಗೆ ಒಂದು ಸಂಜೆ ........ 6
6. ಗಣೇಶೋತ್ಸವ ........ 7
7. ನವೋಲ್ಲಾಸದ ವಸಂತೋತ್ಸವ ........ 9
8. ವಿಶೇಷ ದಿನಗಳು ........ 10
9. ಶ್ರಾವಣದ ಮಡಿಲಲ್ಲಿ ........ 10
10. ಉಡುಪಿಯ ಅಷ್ಟಮಠಗಳಲ್ಲಿನ ಗೋಪಿಧಾರಣಾಕ್ರಮ ..... 12
11. ಮಕ್ಕಳು ಎಂದಿಗೂ ಮಕ್ಕಳೇ ........ 14
12. ವಾಸ್ತು ನಿಯಮಗಳು ........ 14
13. ಬ್ರಾಹ್ಮಣ-ಬ್ರಾಹ್ಮಣ್ಯ-ಒಂದು ಪರಿಕಲ್ಪನೆ ........ 15
14. ಸುದ್ದಿ-ಸಂಗ್ರಹ ........ 19



### ಸದಸ್ಯರಲ್ಲಿ ಮನವಿ


ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ . ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ-ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :


ಯಸ್. ಯಚ್. ಉಪಾಧ್ಯ
24/25 ಕೆ.ವಿ.ಲೇಔಟ್
4ನೇ ಬ್ಲಾಕ್, ಪೂರ್ವ ಜಯನಗರ
ಬೆಂಗಳೂರು - 560 011
ಮೊ : 94480 01892

ಸರ್ವ ಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಕೆ ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಸ್ತುತೆ ॥






# ದೀಪ ದುರ್ಗಾ ನಮಸ್ಕಾರ

## 27.7.2014, ಭಾನುವಾರ

ಪ್ರಿಯ ಸದಸ್ಯ ಬಂಧುಗಳೇ,


ಕಲಿಯುಗದಲ್ಲಿ ಕ್ಷಿಪ್ರ ಫಲವನ್ನು ನೀಡುವ ಶ್ರೀ ದುರ್ಗಾ ಮಾತೆಯ ಆರಾಧನೆ ನಿಮಗೆ, ನಮಗೆ ಮತ್ತು ಬಳಗಕ್ಕೆ ಶ್ರೇಯಸ್ಕರ. ಈ ಅಂಶವನ್ನು ಮನಗಂಡು ನಮ್ಮ ಬಳಗವು ಪ್ರತಿವರ್ಷ ದೀಪ ದುರ್ಗಾ ನಮಸ್ಕಾರವನ್ನು ವಿಜೃಂಭಣೆಯಿಂದ ನಡೆಸುತ್ತಾ ಬಂದಿದೆ. ಸದಸ್ಯರೂ ಸಕ್ರಿಯವಾಗಿ ಪಾಲ್ಗೊಂಡು, ಶ್ರೀದೇವಿಯ ಅನುಗ್ರಹಕ್ಕೆ ಪಾತ್ರರಾಗುತ್ತಿದ್ದಾರೆ.

ಈ ವರ್ಷದ ದೀಪ ದುರ್ಗಾ ನಮಸ್ಕಾರವನ್ನು ಧಾರ್ಮಿಕ ವಿಭಾಗದ ನೇತೃತ್ವದಲ್ಲಿ ಮತ್ತು ಇತರ ವಿಭಾಗಗಳ ಸಹಯೋಗದಲ್ಲಿ



**ದಿನಾಂಕ 27.7.2014ರ ಭಾನುವಾರ ಸಂಜೆ 5 ರಿಂದ ಏರ್ಪಡಿಸಲಾಗಿದೆ.**

**ಸ್ಥಳ : ಆನಂದ ಸಭಾಗೃಹ ಬನ್ನೇರು ಘಟ್ಟ ರಸ್ತೆ, ಬೆಂಗಳೂರು – 7**



ಸದಸ್ಯ ಮಿತ್ರರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಈ ವಿಶೇಷ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ.

| | | |
|---|---|---|
| ಪಿ.ಎಸ್.ಬಾಗಿಲ್ತಾಯ | ವೈ. ರಾಧಾಕೃಷ್ಣ | ವೈ. ಜಯಂತ್‌ರಾವ್ |
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದಬಳಗ | ಸಂಚಾಲಕರು, ಧಾರ್ಮಿಕ ವಿಭಾಗ ಆನಂದ ಬಳಗ |

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :

| | | |
|---|---|---|
| ಶ್ರೀ ಬಾ. ರಾಮಚಂದ್ರ ಉಪಾಧ್ಯ | ಶ್ರೀ ವೈ.ಜಯಂತ್ ರಾವ್ | ಶ್ರೀಮತಿ ವಿಜಯಲಕ್ಷ್ಮಿ ಭಟ್ |
| 9902400072 | 9448274519 | 9844152107 |

## ಗಮನಿಸಿ! ಭಾಗವಹಿಸಿ!

# ಮಕ್ಕಳ ಪ್ರತಿಭಾ ಸ್ಪರ್ಧೆ : 03.8.2014

### ಸ್ಥಳ : ಅಜಂತಾ ಹೋಟೆಲ್ ಆವರಣ, ಎಂ.ಜಿ.ರಸ್ತೆ, ಬೆಂಗಳೂರು

ಆನಂದ ಬಳಗದ ಸಾಂಸ್ಕೃತಿಕ ಸಮಿತಿಯ ನೇತೃತ್ವದಲ್ಲಿ ಮಕ್ಕಳ ಪ್ರತಿಭಾ ಸ್ಪರ್ಧೆಗಳನ್ನು ದಿನಾಂಕ 03.8.2014ರ ಭಾನುವಾರ ಏರ್ಪಡಿಸಲಾಗಿದೆ. ಈ ಸ್ಪರ್ಧೆಗಳು 18 ವರ್ಷದ ಒಳಗಿನ (ಎರಡನೇ ಪಿ.ಯು.ಸಿ.ಯವರೆಗೆ) ಬಾಲಕ ಮತ್ತು ಬಾಲಕಿಯರಿಗೆ ಸೀಮಿತವಾಗಿದ್ದು ವಿವಿಧ ಸ್ಪರ್ಧೆಗಳ ವಿವರ ಈ ರೀತಿ ಇವೆ :

| ಕ್ರ.ಸಂ. | ಸ್ಪರ್ಧೆ | ಸಮಯ | ವಯೋಮಿತಿ |
|---|---|---|---|
| 1. | ಚಿತ್ರಲೇಖನ | ಬೆಳಿಗ್ಗೆ 10.15 ರಿಂದ ಮಧ್ಯಾಹ್ನ 12.00 | 10 ವರ್ಷದವರೆಗೆ<br>10-14 ವರ್ಷದವರೆಗೆ<br>15-18 ವರ್ಷದವರೆಗೆ |
| 2. | ಸಂಸ್ಕೃತ ಶ್ಲೋಕ ಪಠಣ<br>(ವಿಷ್ಣು ಸಹಸ್ರ ನಾಮದ ಯಾವುದಾದರೂ 10 ಶ್ಲೋಕಗಳು) | ಮಧ್ಯಾಹ್ನ 12.00 ರಿಂದ 1.30ರ ವರೆಗೆ | 10 ವರ್ಷದವರೆಗೆ |
| | **ಭೋಜನ ವಿರಾಮ** | **1.30ರಿಂದ 2.00ರವರೆಗೆ** | |
| 3. | ಛದ್ಮವೇಷ (ಫ್ಯಾನ್ಸಿ ಡ್ರೆಸ್) | ಅಪರಾಹ್ನ 2.00 ರಿಂದ 2.45ರ ವರೆಗೆ | 10 ವರ್ಷದವರೆಗೆ |
| 4. | ದೇವರ ನಾಮ / ಭಾವಗೀತೆ | ಅಪರಾಹ್ನ 2.45 ರಿಂದ 4.15ರ ವರೆಗೆ | 10 ವರ್ಷದವರೆಗೆ<br>10-15 ವರ್ಷದವರೆಗೆ<br>15-18 ವರ್ಷದವರೆಗೆ |
| 5. | ಚಲನಚಿತ್ರ ಗೀತೆ (ಕನ್ನಡ/ಹಿಂದಿ) | ಸಂಜೆ 4.15 ರಿಂದ 5.00ರ ವರೆಗೆ | |
| 5. | ಕ್ವಿಜ್ (ಜನರಲ್ ನಾಲೆಡ್ಜ್) | ಸಂಜೆ 5.00 ರಿಂದ 5.30ರವರೆಗೆ | 10-15 ವರ್ಷದವರೆಗೆ<br>15-18 ವರ್ಷದವರೆಗೆ |

ಈ ಅವಕಾಶದ ಪ್ರಯೋಜನವನ್ನು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಪಡೆಯಬೇಕೆಂದು ಕೋರಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ತಮ್ಮ ಹೆಸರುಗಳನ್ನು ಶ್ರೀಮತಿ ಸುಧಾ ಎಂ. ರಾವ್ (25462436/9901127738) / ಶ್ರೀಮತಿ ಗೀತಾ ಪಿ. ಆರ್. ರಾವ್ (23320196/ 9945938411) / ಶ್ರೀ ರಾಜೇಶ್ (9886938802) ಇವರಲ್ಲಿ ದಿನಾಂಕ 31.7.2014ರ ಒಳಗಾಗಿ ನೋಂದಾಯಿಸಬೇಕಾಗಿ ವಿನಂತಿ. ಸ್ಪರ್ಧೆಯ ವಿಷಯಗಳು ಸಂದರ್ಭಾನುಸಾರ ಬದಲಾಗುವ ಸಾಧ್ಯತೆಗಳಿವೆ.

**ಡಾ|| (ಶ್ರೀಮತಿ ವೀಣಾ ಶರತ್)**
ಸಂಚಾಲಕಿ, ಸಾಂಸ್ಕೃತಿಕ ವಿಭಾಗ

## ಬಹುಮುಖ ಪ್ರತಿಭಾವಂತರಿಗೆ ಪುರಸ್ಕಾರ

ಆನಂದ ಬಳಗವು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಯಲ್ಲಿ ಅತ್ಯುತ್ತಮ ಅಂಕ ಪಡೆದು ತೇರ್ಗಡೆಯಾದವರಿಗೆ ಪ್ರತಿಭಾ ಮೇಳದ ದಿನ ನಗದು ಬಹುಮಾನ ನೀಡಿ ಪುರಸ್ಕರಿಸುವ ಕಾರ್ಯಕ್ರಮಗಳನ್ನು ಕಳೆದ ಕೆಲವಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ. ಶಿಕ್ಷಣದ ಜೊತೆಗೆ ಇತರ ರೀತಿಯ ಪ್ರತಿಭೆಗಳನ್ನೂ ಗುರುತಿಸಿ, ಪುರಸ್ಕರಿಸುವ ಸಲುವಾಗಿ ಕಳೆದ ವರ್ಷದಿಂದ ಯಾವುದೇ ಕಲೆ, ಕ್ರೀಡೆ, ಸಾಹಸ ಅಥವಾ ಇನ್ಯಾವುದೇ ವಿಚಾರದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ, ಬಹುಮಾನ, ಪ್ರಶಸ್ತಿಗಳಿಸಿದವರಿಗೆ ಪ್ರತಿಭಾ ಮೇಳದಂದು ಪುರಸ್ಕರಿಸಲಾಗುವುದು. ವಿವರಗಳನ್ನು ದಾಖಲೆ ಸಹಿತ ಸಂಚಾಲಕರು, ಸಾಂಸ್ಕೃತಿಕ ವಿಭಾಗ, ಆನಂದ ಬಳಗ, ಇವರಿಗೆ ದಿನಾಂಕ 03-8-2014ರ ಮೊದಲು ತಲುಪಿಸಬೇಕಾಗಿ ವಿನಂತಿ.

# ಮಕ್ಕಳೊಂದಿಗೊಂದು ಸಂಜೆ ಮತ್ತು ಪ್ರತಿಭಾ ಪುರಸ್ಕಾರ : 31.08.2014

ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ದಿನಾಂಕ 31.8.2014ರ ಭಾನುವಾರ ಸಂಜೆ 4.25ಕ್ಕೆ ''**ಮಕ್ಕಳೊಂದಿಗೊಂದು ಸಂಜೆ**'' ಮತ್ತು ''**ಪ್ರತಿಭಾ ಪುರಸ್ಕಾರ**'' ಕಾರ್ಯಕ್ರಮವನ್ನು ಸಂಯೋಜಿಸಲಾಗಿದೆ.

**ಶ್ರೀ ಹೆಚ್.ಕೆ. ವೆಂಕಟರಾಮ್**

Director, PC Client Group, India; Intel Corp USA

ಇವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಸ್ಥಳ : ಎ.ಡಿ.ಎ. ರಂಗಮಂದಿರ, ಜೆ.ಸಿ. ರಸ್ತೆ, ಬೆಂಗಳೂರು-560 001

ಕಾರ್ಯಕ್ರಮ :

**ಸಂಜೆ 3.30 - 4.15 ಲಘು ಉಪಾಹಾರ**

**ಸಂಜೆ 4.25 : ಪ್ರಾರ್ಥನೆ, ಸ್ವಾಗತ ಮತ್ತು ಅತಿಥಿಗಳ ಹಿತನುಡಿ**

ದಿನಾಂಕ 03.8.2014 ರಂದು ನಡೆಯಲಿರುವ ಪ್ರತಿಭಾ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ

2013-14ನೇ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಉತ್ತಮ ಅಂಕ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮಕ್ಕಳಿಂದ ವಿಶೇಷ ಕಾರ್ಯಕ್ರಮ :

**''ಕೃಷ್ಣ ರಸ ವೈಭವ''**

**ನಿರ್ದೇಶನ :** ನೃತ್ಯ ವಿದುಷಿ ಶ್ರೀಮತಿ ಹಂಸ ನಟರಾಜ್,

ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸಕಾಲಕ್ಕೆ ಆಗಮಿಸಿ, ಬಳಗದ ಬಾಲ ಪ್ರತಿಭೆಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ.

| | | |
|---|---|---|
| **ಪಿ.ಎಸ್. ಬಾಗಿಲ್ತಾಯ** | **ವೈ. ರಾಧಾಕೃಷ್ಣ** | **ಡಾ|| (ಶ್ರೀಮತಿ) ವೀಣಾ ಶರತ್** |
| ಅಧ್ಯಕ್ಷರು, ಆನಂದ ಬಳಗ | ಕಾರ್ಯದರ್ಶಿ, ಆನಂದ ಬಳಗ | ಸಂಚಾಲಕಿ, ಸಾಂಸ್ಕೃತಿಕ ವಿಭಾಗ |

# ವ್ಯಾಸಂಗ ಸಹಾಯ ಯೋಜನೆ

ಆನಂದ ಬಳಗವು ಕೆಲವು ವರ್ಷಗಳ ಹಿಂದೆ ಕೆಲವು ಉದಾರ ಮನಸಿನ ದಾನಿಗಳ ಸಹಕಾರದಿಂದ ಆರಂಭಿಸಿರುವ ವ್ಯಾಸಂಗ ಸಹಾಯ ಯೋಜನೆಯ ಲಾಭವನ್ನು ಬಳಗದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಈಗಾಗಲೇ ಪಡೆದಿರುತ್ತಾರೆ.

2014-15ನೇ ಸಾಲಿನಲ್ಲಿ ವೃತ್ತಿಪರ ಶಿಕ್ಷಣಕ್ಕೆ ಸೇರಬಯಸುವ ಪ್ರತಿಭಾವಂತ ಆದರೆ ಆರ್ಥಿಕವಾಗಿ ದುರ್ಬಲರಾದ ಸದಸ್ಯರ ಮಕ್ಕಳು ಈ ಯೋಜನೆಯ ಲಾಭವನ್ನು ಪಡೆಯಬಹುದಾಗಿದೆ. ಆಸಕ್ತಿಯುಳ್ಳ ಹಾಗೂ ಅರ್ಹ ಸದಸ್ಯರು ಹೆಚ್ಚಿನ ವಿವರಗಳಿಗಾಗಿ

**ಶ್ರೀ ಎಸ್.ಎನ್. ಶರತ್‌ಚಂದ್ರ**

ಸಂಚಾಲಕರು, ವ್ಯಾಸಂಗ ಸಹಾಯ ಯೋಜನೆ

ದೂರವಾಣಿ : 41138879 / 9886040271

ಇವರನ್ನು ಸಂಪರ್ಕಿಸಿ, ದಿನಾಂಕ : 25.8.2014ರ ಒಳಗಾಗಿ ನೋಂದಾಯಿಸಬೇಕಾಗಿ ವಿನಂತಿ.



# ಗಣೇಶೋತ್ಸವ

ಆನಂದ ಬಳಗ ಯುವ ವಿಭಾಗದ ನೇತೃತ್ವದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಗಣೇಶೋತ್ಸವವನ್ನು ದಿನಾಂಕ 07.09.2014ರ ರವಿವಾರದಂದು ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

## ಕಾರ್ಯಕ್ರಮದ ವಿವರ

| | | |
|---|---|---|
| ಪೂರ್ವಾಹ್ನ 9.30 ಘಂಟೆಗೆ | : | 3 ಕಾಯಿ ಗಣಹೋಮ ಆರಂಭ |
| 11.30 ಘಂಟೆಗೆ | : | ಪೂರ್ಣಾಹುತಿ |
| ಮಧ್ಯಾಹ್ನ 12.15 ಘಂಟೆಗೆ | : | ಮಹಾ ಮಂಗಳಾರತಿ |
| ಅಪರಾಹ್ನ 1.00 ಘಂಟೆಗೆ | : | ಭೋಜನ |
| ಅಪರಾಹ್ನ 2.30 ಘಂಟೆಗೆ | : | ಸಭಾಗೃಹದ ಆವರಣದಲ್ಲಿ ಗಣೇಶ ವಿಸರ್ಜನೆ |

ಸ್ಥಳ : ಆನಂದ ಸಭಾಗೃಹ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 83

ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಪಿ.ಎಸ್. ಬಾಗಿಲ್ತಾಯ
ಅಧ್ಯಕ್ಷರು, ಆನಂದ ಬಳಗ

ವೈ. ರಾಧಾಕೃಷ್ಣ
ಕಾರ್ಯದರ್ಶಿ, ಆನಂದ ಬಳಗ

ಸಂದೀಪ್ ರಾವ್
ಸಂಚಾಲಕರು, ಯುವ ವಿಭಾಗ





# ಬೃಂದಾವನ ಗೆಸ್ಟ್ ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block, Bhuvaneshwari Nagar
BSK 3rd Stage, Bangalore - 560 085 E-mail : rajapanambur@yahoo.co.in

Prop.: **Ashokraj P** - **Mob : 99860 40802**

**ವಿ.ಸೂ: ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿನೀಡಲಾಗುವುದು.**



ಶುಭಾಶಯಗಳನ್ನು ಕೋರುವವರು

|| ಹರಿಃ ಓಂ ||



# ಉಪಾಧ್ಯ ಮತ್ತು ಕಂಪನಿ

**(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)**

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

### ಉಪಾಧ್ಯ ಆಯುರ್ವೇದ ಭಂಡಾರ

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ನವೋಲ್ಲಾಸದ ವಸಂತೋತ್ಸವ

ಆನಂದ ಬಳಗವು ಪ್ರತಿವರ್ಷದ ಕಾರ್ಯಚಟುವಟಿಕೆಗಳನ್ನು ಆರಂಭಿಸುವುದೇ ವಸಂತೋತ್ಸವದ ಮೂಲಕ. ನೂತನ ಸಂವತ್ಸರ ವಸಂತದ ಸಂಭ್ರಮದೊಂದಿಗೆ ಪ್ರಾರಂಭವಾದಂತೆ, ಬಳಗದ ವರ್ಷಪೂರ್ತಿ ಚಟುವಟಿಕೆಗಳಿಗೆ ನಾಂದಿ ಹಾಡುವ ಕಾರ್ಯಕ್ರಮವೇ ವಸಂತೋತ್ಸವ. ಈ ವರ್ಷದ ವಸಂತೋತ್ಸವವು ದಿನಾಂಕ 25.5.2014ರಂದು ಸಂಜೆ ಹೋಟೆಲ್ ಅಜಂತಾ ಆವರಣದಲ್ಲಿ ಅತೀ ವಿಜೃಂಭಣೆಯಿಂದ ನೆರವೇರಿಸಿತು. ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಭಾಗಗಳ ಜಂಟಿ ಸಹಯೋಗದೊಂದಿಗೆ ಸಂಯೋಜಿಸಿದ ಈ ಉತ್ಸವ ಶ್ರೀಮತಿ ವಿದ್ಯಾ ವಾದಿರಾಜರವರು ಹಾಡಿದ ಪ್ರಾರ್ಥನಾ ಗೀತೆಯೊಂದಿಗೆ ಆರಂಭವಾಯಿತು.



ಗಣ್ಯರನ್ನು ಮತ್ತು ಸದಸ್ಯರನ್ನು ಶ್ರೀಮತಿ ಮೀನಾ ಮಹಾಬಲೇಶ್ವರರವರು ಸ್ವಾಗತಿಸಿದರು. ಅಂದಿನ ಸಂಜೆ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿದ್ಯಾವಾಚಸ್ಪತಿ ಡಾ. ಅರಳುಮಲ್ಲಿಗೆ ಪಾರ್ಥಸಾರಥಿಯವರ ಪರಿಚಯವನ್ನು ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ.ಜಯಂತರಾವ್ ಸಭೆಗೆ ಮಾಡಿಕೊಟ್ಟರು.

ಸಮಾರಂಭದಲ್ಲಿ ಪ್ರಧಾನ ಭಾಷಣ ಮಾಡಿದ ಡಾ। ಅರಳುಮಲ್ಲಿಗೆ ಪಾರ್ಥಸಾರಥಿಯವರು ಆನಂದ ಬಳಗಕ್ಕೆ ಈ ಹೆಸರು ಇಟ್ಟಿರುವವರ ದೂರದೃಷ್ಟಿಯ ಪರಿಕಲ್ಪನೆ ಶ್ಲಾಘನೀಯ ಎಂದು ಹೇಳಿ, ಬಳಗವು ಹೆಸರಿಗೆ ತಕ್ಕಂತೆ ಆನಂದಮಯ ವಾತಾವರಣದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಸಂತಸದ ವಿಚಾರ ವೆಂದರು. ಆನಂದ ಬಳಗವು ಇತರ ಸಂಸ್ಥೆಗಳಿಗೆ ಆದರ್ಶಪ್ರಾಯ ವಾಗಿದೆ ಎಂದರು. ಕರಾವಳಿ ಪ್ರದೇಶದ ಸಾಹಿತ್ಯಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ, ಧಾರ್ಮಿಕ ಮನೋಭಾವ ಅವರಿಗೆ ಜಗತ್ತಿನಾದ್ಯಂತ ವಿಶೇಷ ಸ್ಥಾನ-ಮಾನ ಕಲ್ಪಿಸಿದೆ ಎಂದ ಡಾ। ಅರಳುಮಲ್ಲಿಗೆ ಯವರು ತಮ್ಮ ಭಾಷಣದಲ್ಲಿ ದಾಸ ಸಾಹಿತ್ಯದ ಗಂಭೀರವಾದ ಸಂದೇಶ, ವಿಷ್ಣು ಸಹಸ್ರನಾಮ ಪಠಣದ ಮಹತ್ವ ಮುಂತಾದ ವಿಷಯಗಳ ಬಗ್ಗೆ ಮನಮುಟ್ಟುವಂತೆ ಹಾಗೂ ಅತ್ಯಂತ ಪ್ರಭಾವಪೂರ್ಣವಾಗಿ ಮಾತನಾಡಿದರು. ಶ್ರೀಯುತರ ಅಮೋಘವಾದ ಸಂದೇಶ ಭಾಷಣದ ನಂತರ ಬಳಗದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಡಾ॥ ಪಾರ್ಥಸಾರಥಿಯವರಿಗೆ ಗೌರವಾರ್ಪಣೆ ಮಾಡಿದರು. ಬಳಗದ ಅಧ್ಯಕ್ಷರಾದ ಶ್ರೀ ಪಿ.ಎಸ್. ಬಾಗಿಲ್ತಾಯರವರು ಬಳಗದ ಎಲ್ಲಾ ಕಾರ್ಯಕ್ರಮಗಳಲ್ಲಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳವುದು ಬಳಗದ ಅಭಿವೃದ್ಧಿಯ ದಿಸೆಯಲ್ಲಿ ಅತೀಮುಖ್ಯವೆಂದರೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಯೋಜಿಸಿದ ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಭಾಗದ ಕಾರ್ಯತಂಡವನ್ನು ಅಭಿನಂದಿಸಿದ ಅಧ್ಯಕ್ಷರು ವರ್ಷದ ಎಲ್ಲಾ ಕಾರ್ಯಕ್ರಮಗಳೂ ಇದೇ ರೀತಿ ಯಶ ಕಾಣಲಿ ಎಂದು ಆಶಿಸಿದರು. ವೈ. ರಾಧಾಕೃಷ್ಣ ರವರ ಧನ್ಯವಾದಾರ್ಪಣೆಯೊ ಂದಿಗೆ ಮುಕ್ತಾಯವಾದ ಸಭಾಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ರಮೇಶ್ ಭಟ್ ಸೊಗಸಾಗಿ ನಿರ್ವಹಿಸಿದರು.

ಸಭಾ ಕಾರ್ಯಕ್ರಮದ ನಂತರ ವಸಂತ ಋತು ಅಭಿಮಾನಿ ದೇವತೆ ವಸಂತ ವಲ್ಲಭನಿಗೆ ಯುವ ಕಲಾವಿದ ಮನೋಹರ ಪಟವರ್ಧನ್‌ರವರಿಂದ ಗಾನದ ಆರಾಧನೆ ನಡೆಯಿತು. ಹಿರಿಯ ಹಾಗೂ ವಿಖ್ಯಾತ ಕಲಾವಿದೆ ವಿದುಷಿ ಶ್ರೀಮತಿ ಶಾಂತಾ ಪೋತಿಯವರ ನಿರ್ದೇಶನದಲ್ಲಿ ಅತ್ಯಂತ ಸೊಗಸಾಗಿ ನಡೆದ



ವಸಂತಗಾನ, ಸಭಿಕರ ಮನಕ್ಕೆ ಮುದ ನೀಡಿತು. ಸಂಗೀತಾರಾಧನೆಯ ಬಳಿಕ ವೇದಿಕೆಯ ಭವ್ಯ ಮಂಟಪದಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀ ಕೃಷ್ಣನಿಗೆ ಮಹಾ ಮಂಗಳಾರತಿ ನಡೆಯಿತು. ಶ್ರೀ ಪಾವಂಜೆ ಶಿವರಾಮ ಭಟ್ ಮತ್ತು ಶ್ರೀ ಎಂ.ಕೆ. ಗುರುಮೂರ್ತಿಯವರ ಚೆಂಡೆಯ ಜುಗಲ್ ಬಂದಿ ಪೂಜಾ ಕಾಲದಲ್ಲಿ ಸಡಗರವನ್ನು ದ್ವಿಗುಣಗೊಳಿಸಿತು. ಪೂಜೆ, ಪ್ರಸಾದ ವಿತರಣೆಯ ನಂತರ ಹೋಟೆಲ್ ಅಜಂತಾದವರು ಉದಾರತೆ ಯಿಂದ ವ್ಯವಸ್ಥೆ ಮಾಡಿದ ವಿಶೇಷವಾದ ಫಲಾಹಾರವು ಭರ್ಜರಿ ಯಾಗಿತ್ತು. ವರ್ಷದ ಮೊದಲ ಕಾರ್ಯಕ್ರಮದಲ್ಲಿ ನವೋಲ್ಲಾಸದಲ್ಲಿ ಪಾಲ್ಗೊಂಡ ಸದಸ್ಯರು ಹಾಗೂ ಅಚ್ಚುಕಟ್ಟಾಗಿ ಸಂಯೋಜಿಸುವಲ್ಲಿ ಶ್ರಮಿಸಿದ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಭಾಗದ ಸಂಚಾಲಕರು ಮತ್ತು ಅವರ ತಂಡಕ್ಕೆ ಮೆಚ್ಚುಗೆಯ ಅಭಿನಂದನೆಗಳು

– ಸತ್ಯ

# ಶ್ರಾವಣದ ಮಡಿಲಲ್ಲಿ

ಶ್ರಾವಣದ ತುಂತುರವು ಭೂತಾಯಿ ಒಡಲಲ್ಲಿ
ತಂಪು ಸೂಸಲು ಹೊಲವು ಹಚ್ಚಹಸುರಾಯ್ತು
ಅಶ್ವತ್ಥ ವೃಕ್ಷದಾ ನೆರಳಲ್ಲಿ ನಿಂದಂತಾ;
ನಾಗದೈವವು ನಾಗಪಂಚಮಿಯಲಿ

ವರಲಕ್ಷ್ಮಿಯುದಿಸಿದಳು ಶುಕ್ರವಾರದ ದಿನದಿ
ಕಲಶದಲ್ಲಿ ಸ್ಥಿತಳಾಗಿ ಪೂಜೆಗೊಂಬುವಳು
ಶ್ರಾವಣದ ಮುಸ್ಸಂಜೆ ವರಲಕ್ಷ್ಮಿ ಇಹಳಿಲ್ಲಿ
ವರದ ನೀಡುವ ತಾಯಿ ಪ್ರಸನ್ನವದನೆ

ಶ್ರಾವಣದ ಮಳೆಯಲ್ಲಿ ಮಲ್ಲಿಗೆಯ ಕಂಪಲ್ಲಿ
ಧರೆಗಿಳಿದ ಭಗವಂತ ಕೃಷ್ಣನಾಗಿ
ದೇವತೆಯ ಗರ್ಭದಿಂದುದಿಸಿದಾ ಭಗವಂತ
ಮೊಸರು ಬೆಣ್ಣೆಯ ಮೆದ್ದ ತುಂಟನಾಗಿ

ದುಷ್ಟಕಾಳಿಂಗನಾ ಫಣತಿಯನ್ನು ತುಳಿದಿಕ್ಕಿ
ಗೋವುಗಳ ಸಲಹಿದನು ನಮ್ಮ ಕೃಷ್ಣ
ದುಷ್ಟ ನಿಗ್ರಹಕ್ಕಾಗಿ ಫಣತೊಟ್ಟ ಮುರಾರಿ
ನಗುನಗುತ ಮರ್ದಿಸಿದ ಮಾವಕಂಸ

ಚಂದ್ರಮನ ರಾತ್ರಿಯಲಿ - ಗೋಪಿಯರ ಮನಗೆದ್ದ
ಬೆಳದಿಂಗಳಾಟದಲಿ ರಾಸಕ್ರೀಡೆ
ಕುರುಕ್ಷೇತ್ರ ಯುದ್ದದಲಿ ಜಗಕೆಲ್ಲ ಬೆಳಕಾಗಿ
ನರನಿಗುಸುರಿದ ಗೀತ ಅಮೃತಪಾನ.

- ಕೋಟೇಶ್ವರ ಸೂರ್ಯನಾರಾಯಣ ರಾವ್

## ಆಗಸ್ಟ್-ಅಕ್ಟೋಬರ್ 2014 ಅವಧಿಯ ವಿಶೇಷ ದಿನಗಳು

| | | |
|---|---|---|
| ಆಗಸ್ಟ್ 1 | ಶುಕ್ರವಾರ | ನಾಗಪಂಚಮಿ |
| ಆಗಸ್ಟ್ 2 | ಶನಿವಾರ | ಮೊದಲನೇ ಶ್ರಾವಣ ಶನಿವಾರ |
| ಆಗಸ್ಟ್ 7 | ಗುರುವಾರ | ಸರ್ವೈಕಾದಶೀ |
| ಆಗಸ್ಟ್ 8 | ಶುಕ್ರವಾರ | ವರಮಹಾಲಕ್ಷ್ಮೀ ವ್ರತ |
| ಆಗಸ್ಟ್ 10 | ಭಾನುವಾರ | ಆಡಿ ಹುಣ್ಣಿಮೆ, ಯುಜುರುಪಾಕರ್ಮ |
| ಆಗಸ್ಟ್ 12 | ಮಂಗಳವಾರ | ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನೆ |
| ಆಗಸ್ಟ್ 16 | ಶನಿವಾರ | ಸಿಂಹ ಸಂಕ್ರಮಣ |
| ಆಗಸ್ಟ್ 17 | ಭಾನುವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| ಆಗಸ್ಟ್ 21 | ಗುರುವಾರ | ಸರ್ವೈಕಾದಶೀ |
| ಆಗಸ್ಟ್ 25 | ಸೋಮವಾರ | ಅಮಾವಾಸ್ಯೆ |
| ಆಗಸ್ಟ್ 28 | ಗುರುವಾರ | ಗೌರೀ ತೃತೀಯಾ |
| ಆಗಸ್ಟ್ 29 | ಶುಕ್ರವಾರ | ಗಣೇಶ ಚತುರ್ಥಿ ಸಾಮಗೋಪಕರ್ಮ |
| ಸೆಪ್ಟಂಬರ್ 5 | ಶುಕ್ರವಾರ | ಸರ್ವೈಕಾದಶೀ |
| ಸೆಪ್ಟಂಬರ್ 7 | ಭಾನುವಾರ | ಸೌರ ಋಗುಪಾಕರ್ಮ |
| ಸೆಪ್ಟಂಬರ್ 8 | ಸೋಮವಾರ | ಅನಂತ ಚತುರ್ದಶಿ |
| ಸೆಪ್ಟಂಬರ್ 9 | ಮಂಗಳವಾರ | ಹುಣ್ಣಿಮೆ |
| ಸೆಪ್ಟಂಬರ್ 16 | ಮಂಗಳವಾರ | ಕನ್ಯಾಸಂಕ್ರಮಣ |
| ಸೆಪ್ಟಂಬರ್ 24 | ಬುಧವಾರ | ಮಹಾಲಯ ಅಮಾವಾಸ್ಯೆ |
| ಸೆಪ್ಟಂಬರ್ 29 | ಸೋಮವಾರ | ಲಲಿತಾ ಪಂಚಮಿ |
| ಅಕ್ಟೋಬರ್ 1 | ಬುಧವಾರ | ವ್ಯಾಸಪ್ರತಿಷ್ಠೆ |
| ಅಕ್ಟೋಬರ್ 4 | ಶನಿವಾರ | ವಿಜಯದಶಮಿ |
| ಅಕ್ಟೋಬರ್ 5 | ಭಾನುವಾರ | ವೈಷ್ಣವೈಕಾದಶಿ |
| ಅಕ್ಟೋಬರ್ 8 | ಬುಧವಾರ | ಪೂರ್ಣಿಮಾ |
| ಅಕ್ಟೋಬರ್ 17 | ಶುಕ್ರವಾರ | ತುಲಾ ಸಂಕ್ರಮಣ |
| ಅಕ್ಟೋಬರ್ 19 | ಭಾನುವಾರ | ಸರ್ವೈಕಾದಶೀ |
| ಅಕ್ಟೋಬರ್ 22 | ಬುಧವಾರ | ನರಕ ಚತುರ್ದಶಿ |
| ಅಕ್ಟೋಬರ್ 23 | ಗುರುವಾರ | ಅಮಾವಾಸ್ಯೆ , ಲಕ್ಷ್ಮೀಪೂಜಾ, ಬಲೀಂದ್ರ ಪೂಜಾ |
| ಅಕ್ಟೋಬರ್ 24 | ಶುಕ್ರವಾರ | ಗೋಪೂಜೆ, ತುಲಸೀ ಪೂಜಾರಂಭ |

(ಆಧಾರ : ಉಡುಪಿ ಶ್ರೀ ಪೂರ್ಣಪ್ರಜ್ಞ ಪಂಚಾಂಗಂ)

## ಆನಂದಬಳಗ ಪ್ರೀಮಿಯರ್ ಲೀಗ್ (ಎ.ಪಿ.ಎಲ್) - 2014

ಐಪಿಎಲ್, ಕೆ.ಪಿ.ಎಲ್ ಹೀಗೆ ನಮ್ಮಲ್ಲಿ ಸೀಮಿತ ಓವರ್ ಕ್ರಿಕೆಟ್‌ನ ಆಸಕ್ತಿ ಜಾಸ್ತಿಯಾಗುತ್ತಿದೆ. ಬಳಗದ ಸದಸ್ಯರಿಗಾಗಿ, ಸದಸ್ಯರಿಗೋಸ್ಕರ ಮತ್ತು ಸದಸ್ಯರಿಂದ ಆನಂದ ಬಳಗ ಪ್ರೀಮಿಯರ್ ಲೀಗ್ (ಎಪಿಎಲ್ 2014) ಕ್ರಿಕೆಟ್ ಪಂದ್ಯಾಟವನ್ನು ಏರ್ಪಡಿಸಲು ಉದ್ದೇಶಿಲಾಗಿದೆ. ಸುಮಾರು 8-10 ತಂಡಗಳನ್ನು ರೂಪಿಸುವ ಉದ್ದೇಶವಿದ್ದು, ಪ್ರತಿಯೊಂದು ತಂಡದ ಪ್ರಾಯೋಜಕರಾಗಲು ಎಲ್ಲರಿಗೂ ಅವಕಾಶವಿದೆ. ಈ ರೀತಿಯ ಪ್ರಾಯೋಜಕರಾಗಲು ಹಾಗೂ ತಂಡದಲ್ಲಿ ಸೇರಿ ಕ್ರಿಕೆಟ್ ಆಟ ಆಡಲು ಆಸಕ್ತಿಯುಳ್ಳವರು ದಿನಾಂಕ 31.8.2014ರ ಒಳಗಾಗಿ ಬಳಗದ ಕಾರ್ಯದರ್ಶಿ (9844058851) ಅಥವಾ ಕೋಶಾಧಿಕಾರಿಯನ್ನು (9844022692) ಸಂಪರ್ಕಿಸಲು ಕೋರಲಾಗಿದೆ. ಸದಸ್ಯರ ಪ್ರತಿಕ್ರಿಯೆಯನ್ನು ಆಧರಿಸಿ, ಎಪಿಎಲ್ 2014ರ ಬಗ್ಗೆ ಸೂಕ್ತ ತೀರ್ಮಾನವನ್ನು ಕೈಗೊಳ್ಳಲಾಗುವುದು.

*With Best Compliments From :*

# M. BHASKAR RAO

## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

## ಗಮನಿಸಿ : ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನ

ಆನಂದ ಬಳಗವು ಪ್ರತಿ ವರ್ಷದಂತೆ ಈ ವರ್ಷವೂ ಬಳಗದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬಹುಮಾನವನ್ನು ನೀಡಿ ಅವರ ಪ್ರತಿಭೆಯನ್ನು ಪುರಸ್ಕರಿಸಲಿದೆ. ಮಾರ್ಚ್/ಏಪ್ರಿಲ್ 2014ನೇ ತಿಂಗಳಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಮತ್ತು 2ನೇ ಪಿ.ಯು.ಸಿ. ಪರೀಕ್ಷೆಯಲ್ಲಿ ಅಧಿಕ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು.

**ಪ್ರತಿಭಾ ಪುರಸ್ಕಾರಕ್ಕಾಗಿ ಪರಿಗಣಿಸುವ ಅಂಕಗಳ ವಿವರ :**

| | | | |
|---|---|---|---|
| **ಎಸ್.ಎಸ್.ಎಲ್.ಸಿ./10ನೇ ತರಗತಿ** | : | **ಶೇಕಡ 91 ಮತ್ತು ಜಾಸ್ತಿ** | |
| **ಸಿ.ಬಿ.ಎಸ್.ಸಿ.** | : | **ಸಿ.ಜಿ.ಪಿ.ಎ. 9.6 ಮತ್ತು ಜಾಸ್ತಿ** | |
| **ಐ.ಸಿ.ಎಸ್.ಸಿ.** | : | **ಸಿ.ಜಿ.ಪಿ.ಎ. ಶೇಕಡ 91 ಮತ್ತು ಜಾಸ್ತಿ** | |
| **ದ್ವಿತೀಯ ಪಿ.ಯು.ಸಿ./12ನೇ ತರಗತಿ** | : | **ಸೈನ್ಸ್/ವಿಜ್ಞಾನ** | **ಶೇಕಡ 90 ಮತ್ತು ಜಾಸ್ತಿ** |
| | | **ಕಾಮರ್ಸ್/ವಾಣಿಜ್ಯ** | **ಶೇಕಡ 90 ಮತ್ತು ಜಾಸ್ತಿ** |
| | | **ಕಲೆ / ಆರ್ಟ್ಸ್** | **ಶೇಕಡ 85 ಮತ್ತು ಜಾಸ್ತಿ** |

ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ತಮ್ಮ ಹೆಸರು, ವಿಳಾಸ, ಪಾರ್ಸ್‌ಪೋರ್ಟ್ ಅಳತೆಯ ಭಾವಚಿತ್ರ, ಬಳಗದ ಸದಸ್ಯರ ಜೊತೆಗಿನ ಸಂಬಂಧ, ದೂರವಾಣಿ ಸಂಖ್ಯೆ ಮೊದಲಾದ ವಿವರಗಳು ಹಾಗೂ ಅಂಕಪಟ್ಟಿಯ ಪ್ರತಿಯನ್ನು ಆನಂದ ಬಳಗದ ಕಚೇರಿಗೆ ದಿನಾಂಕ 10.8.2014ರ ಮುಂಚಿತವಾಗಿ ತಲುಪುವಂತೆ ಕಳುಹಿಸಲು ಕೋರಲಾಗಿದೆ. ಪ್ರತಿಭಾ ಪುರಸ್ಕಾರಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ದೂರವಾಣಿ ಮೂಲಕ ತಿಳಿಸಲಾಗುವುದು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ದಿನಾಂಕ 31-8-2014ರಂದು ನಡೆಯಲಿದೆ.

# ಉಡುಪಿಯ ಅಷ್ಟ ಮಠಗಳಲ್ಲಿನ ಗೋಪಿ ಧಾರಣಾಕ್ರಮ

ಈಗ ಉಡುಪಿ ಅಷ್ಟಮಠದ ಶಿಷ್ಯಾನುಯಾಯಿಗಳು, ಮಠ ಸಂಪ್ರದಾಯದ ಗೋಪಿ ಧಾರಣಾ ಕ್ರಮವನ್ನು ಮರೆತಿದ್ದಾರೆ. ಉಪನೀತ ವಟುವನ್ನು ಚೌಲ ಸ್ನಾನಾದಿಗಳನ್ನು ಮುಗಿಸಿ ಅಲಂಕಾರಕ್ಕೆ ನಿಲ್ಲಿಸುವಾಗ ಗೋಪಿ ಧಾರಣೆ ಮಾಡುವ ಸಮಯದಲ್ಲಿ ಪುರೋಹಿತರು ಕೇಳುತ್ತಾರೆ: ''ನಿಮ್ಮದು ಯಾವ ಮಠ ಸಂಪ್ರದಾಯ?'' ಎಂದು ಆ ಸಂದರ್ಭದಲ್ಲಿ ನಮ್ಮ ನಮ್ಮ ಮೂಲ ಮಠ ಸಂಪ್ರದಾಯದ ಗೋಪಿ ಧಾರಣಾ ಕ್ರಮವನ್ನು ತಿಳಿದಿರುವುದು ಅವಶ್ಯ.

ಇದರೊಂದಿಗೆ ಗೋತ್ರ, ಪ್ರವರ, ಋಷಿಗಳನ್ನು ತಿಳಿದಿರುವುದು ಅವಶ್ಯ ಹಾಗೂ ಕುಲದೇವರು. ಗ್ರಾಮದೇವರು ಯಾರು? ಎಂಬ ಗೊಂದಲವೂ ಕೆಲವರಿಗೆ ಇದೆ. ಇದನ್ನೆಲ್ಲ ಹಿರಿಯ ರಿಂದಲೋ ಅಥವಾ ಪ್ರಶ್ನೆಯಿಂದಲೋ ತಿಳಿದು ಕೊಳ್ಳಬಹುದು.

ಹಿಂದೆ ಪರ್ಯಾಯ ಸಮಾರಂಭದಲ್ಲಿ ಊಟ ಬಡಿಸುವ ಸಂದರ್ಭದಲ್ಲಿ ಗೋಪಿ ಧಾರಣೆಯನ್ನು ನೋಡಿಯೇ ಇವರು ಇಂತಹ ಮಠದವರೆಂದು ಗುರುತು ಹಿಡಿಯುತ್ತಿದ್ದರು. ಈಗ ಆನಂದ ಬಳಗದ ಸದಸ್ಯರು ಎಲ್ಲಾ ಅಷ್ಟಮಠದ ಅನುಯಾಯಿಗಳೂ ಇರುವುದರಿಂದ. ಈ ಲೇಖನದಲ್ಲಿ ಉಡುಪಿ ಅಷ್ಟಮಠದ ಶಿಷ್ಯರ ಗೋಪಿಧಾರಣಾ ಕ್ರಮವನ್ನು ನೀಡಿದೆ. ಸಂಪ್ರದಾಯಸ್ಥರು ಇದರ ಪ್ರಯೋಜನ ಪಡೆಯಲು ಕೋರಿದೆ.

ಗೋಪಿಚಂದನ ಪಾಪಘ್ನ ವಿಷ್ಣುದೇಹ ಸಮುದ್ಭವ ।
ಚಕ್ರಾಂಕಿತ ನಮಸ್ತೇಽಸ್ತು ಧಾರಣಾತ್ ಮುಕ್ತಿದೋ ಭವ ॥

ಎಂದು ನಿರ್ಮಾಲ್ಯ ತೀರ್ಥದಿಂದ ಗೋಪಿಯನ್ನು ಹಿಡಿದು ಎಡಗೈಗೆ ಸ್ವಲ್ಪ ನೀರನ್ನು ಹಾಕಿ ''ಪ್ರದಕ್ಷಿಣಾಕಾರವಾಗಿ'' ತೇಯಬೇಕು.


| | ದ್ವಾದಶ ನಾಮ | ಎಲ್ಲಿ? |
|---|---|---|
| 1. | ಓಂ ಕೇಶಾವಾಯ ನಮಃ | ಹಣೆಯಲ್ಲಿ ದಂಡಾಕಾರ ಆಕಾರದಲ್ಲಿ |
| 2. | ಓಂ ನಾರಾಯಣಾಯ ನಮಃ | ಹೊಟ್ಟೆಯ ಮಧ್ಯ ದೀಪಾಕಾರ |
| 3. | ಓಂ ಮಾಧವಾಯ ನಮಃ | ಎದೆಯ ಮಧ್ಯಭಾಗ ಕಮಲದಳಾಕಾರ |
| 4. | ಓಂ ಗೋವಿಂದಾಯ ನಮಃ | ಕುತ್ತಿಗೆಯ ಮಧ್ಯಭಾಗ ದೀಪಾಕಾರ |
| 5. | ಓಂ ವಿಷ್ಣವೇ ನಮಃ | ಹೊಟ್ಟೆಯ ಜಲಭಾಗ ದೀಪಾಕಾರ |
| 6. | ಓಂ ಮಧುಸೂದನಾಯ ನಮಃ | ಬಲಭುಜ ಬಿದಿರಿನ ಎಲೆಯಾಕಾರ |
| 7. | ಓಂ ತ್ರಿವಿಕ್ರಮಾಯ ನಮಃ | ಕುತ್ತಿಗೆ ಬಲಭಾಗ ದೀಪಾಕಾರ |
| 8. | ಓಂ ವಾಮನಾಯ ನಮಃ | ಹೊಟ್ಟೆಯ ಎಡ ಭಾಗ ದೀಪಾಕಾರ |
| 9. | ಓಂ ಶ್ರೀಧರಾಯ ನಮಃ | ಎಡಭುಜ ಬಿದಿರಿನ ಎಲೆಯಾಕಾರ |
| 10. | ಓಂ ಹೃಷಿಕೇಶಾಯ ನಮಃ | ಕುತ್ತಿಗೆಯ ಎಡಭಾಗ ದೀಪಾಕಾರ |
| 11. | ಓಂ ಪದ್ಮನಾಭಾಯ ನಮಃ | ಬೆನ್ನಿನ ಹಿಂಭಾಗ ದೀಪಾಕಾರ |
| 12. | ಓಂ ದಾಮೋದರಾಯ ನಮಃ | ಕುತ್ತಿಗೆ ಹಿಂಭಾಗ ದೀಪಾಕಾರ |

ಇವಿಷ್ಟು ಎಲ್ಲ ಮಠದವರಿಗೂ ಸಾಮಾನ್ಯ ಕ್ರಮ ಹಾಗೂ ಮುದ್ರೆ ಅಷ್ಟಮಠದ ಸಂಪ್ರದಾಯ ಭೇದದ ವ್ಯತ್ಯಾಸ ಕ್ರಮವನ್ನು ಮುಂದೆ ಚಿತ್ರಸಹಿತ ವಿವರ ನೀಡಿದೆ.




ದಂಡಾಕಾರ ದೀಪಾಕಾರ ಬಿದಿರಿನ ಎಲೆಯಾಕಾರ

**1. ಶ್ರೀ ಫಲಿಮಾರು ಮಠ**





ಎದೆಯ ಬಲಭಾಗದಲ್ಲಿ ಕೆಳಮುಖ ಒಂದು ನಾಮ, ಎಡಭಾಗದಲ್ಲಿ ಏನೂ ಇಲ್ಲ

**2. ಶ್ರೀ ಅದಮಾರು ಮಠ**





ಎದೆಯ ಬಲಭಾಗದ ಹಾಗೂ ಎಡಭಾಗಗಳಲ್ಲಿ ಕೆಳಮುಖವಾಗಿ ಒಂದೊಂದು ನಾಮ.

**3. ಶ್ರೀ ಕೃಷ್ಣಾಪುರ ಮಠ**




ಎದೆಯ ಬಲಭಾಗದಲ್ಲಿ ಒಂದು ಮೇಲ್ಮುಖ ಚಿಕ್ಕನಾಮ. ಎಡಭಾಗದಲ್ಲಿ ಒಂದು ದೊಡ್ಡ ಬೊಟ್ಟು.


**4. ಶ್ರೀ ಪುತ್ತಿಗೆ ಮಠ**




ಎದೆಯ ಎಡ ಹಾಗೂ ಬಲಭಾಗದಲ್ಲಿ ಮೇಲ್ಮುಖ ಒಂದೊಂದು ನಾಮ.

ಬೆಂಗಳೂರಿನಂತಹ ಮಹಾನಗರದಲ್ಲಿ ಉಡುಪಿ ಅಷ್ಟಮಠದ ಎಲ್ಲಾ ಶಿಷ್ಯಾನುಯಾಯಿಗಳು ಇರುವುದರಿಂದ ಎಲ್ಲ ಮಠಗಳ ಗೋಪಿಧಾರಣ ಕ್ರಮವನ್ನು ಚಿತ್ರ ಸಹಿತ ವಿವರಿಸಿದೆ. ಆಸಕ್ತರು ಮುಂದೆ ಬರುವ ಪ್ರಥಮನ ಏಕಾದಶಿ ಯಂದಾದರೂ ಇದನ್ನು ಅನುಸರಿಸಿ ಶ್ರೀ ಮದ್ವಾಂತರ್ಗತ ಕೃಷ್ಣನ ಅನುಗ್ರಹಕ್ಕೆ

**5. ಶ್ರೀ ಶೀರೂರು ಮಠ**





ಎದೆಯ ಬಲಭಾಗದಲ್ಲಿ ಮೇಲ್ಮುಖ ಒಂದು ನಾಮ ಎದೆಯ ಎಡಭಾಗದಲ್ಲಿ ಚಿಕ್ಕಬೊಟ್ಟು. ಅದರ ಮೇಲೆ ಚಿಕ್ಕನಾಮ.

**6. ಶ್ರೀ ಸೋದೆ ಮಠ**





ಎದೆಯ ಎಡ ಹಾಗೂ ಬಲಭಾಗದಲ್ಲಿ ಕೆಳಮುಖ ಒಂದೊಂದು ನಾಮ.

**7. ಶ್ರೀ ಕಾಣಿಯೂರು ಮಠ**




ಎದೆಯ ಬಲಭಾಗದಲ್ಲಿ ಮೇಲ್ಮುಖ ಒಂದು ಎಡಭಾಗದಲ್ಲಿ ಒಂದು ಚಿಕ್ಕ ಬೊಟ್ಟು

**8. ಶ್ರೀ ಪೇಜಾವರ ಮಠ**




ಹೊಟ್ಟೆಯ ಬಲ ಹಾಗೂ ಎಡನಾಮಗಳನ್ನೂ ಎದೆಯ ಮಧ್ಯಭಾಗದವರೆಗೆ ವಿಸ್ತರಿಸುವುದು.

ಪಾತ್ರರಾಗಬೇಕೆಂದು ಕೋರಿಕೆ. ಈ ಲೇಖನಕ್ಕೆ ಸ್ಫೂರ್ತಿ ಹಾಗೂ ಆಕರ ಮಾಹಿತಿ ನೀಡಿದವರು - ''ವಂದನೆ ಅರ್ಚನೆ'' ಎಂಬ ಪುಸ್ತಕ ಬರೆದ ಶ್ರೀ ಕೃಷ್ಣಮೂರ್ತಿ ಉಪಾಧ್ಯಾಯ ರೆಂಜಾಳ, ಚಿತ್ರಲೇಖನ : ಮಟ್ಟಿ ರಾಮಚಂದ್ರರಾವ್ ಚಿತ್ರಕಲಾವಿದ/ಛಾಯಾಗ್ರಾಹಕರು, ನಂ. 1007, 9ನೇ ಮುಖ್ಯರಸ್ತೆ, ಶ್ರೀನಿವಾಸ ನಗರ, ಬೆಂಗಳೂರು - 50. ಮೊಬೈಲ್ : 9448670741

ಅಭಿಪ್ರಾಯ ಸಲಹೆಗೆ ಸ್ವಾಗತ

# ಮಕ್ಕಳು ಎಂದಿಗೂ ಮಕ್ಕಳೇ

ಮಕ್ಕಳು ಮಕ್ಕಳು ಮಕ್ಕಳು
ಮಕ್ಕಳು ಎಂದಿಗೂ ಮಕ್ಕಳೆ!
ಮಕ್ಕಳೆಂದರೆ ಅದೆಷ್ಟು ಅಕ್ಕರೆ,
ಸಕ್ಕರೆಯ ಸಿಹಿಗಿಂತಲೂ, ಇಲ್ಲಾ
ಇನ್ನು ಯಾವುದೇ ಸಿಹಿಗಿಂತಲೂ ಸವಿ!
ಹೌದು, ಮಕ್ಕಳಿರಲವ್ವಾ ಮನೆ ತುಂಬ ಎನ್ನುವರು,
''ಮಕ್ಕಳೇ ಮನೆಗೆ ಮಾಣಿಕ್ಯ'' ಚೆನ್ನು ನಾಣ್ಣುಡಿ,
ಮಕ್ಕಳು ಮುದ್ದು ಮಕ್ಕಳು, ಮುಗ್ಧ ಮಕ್ಕಳು.

ಮಕ್ಕಳ ಯಾವುದೇ ಚೇಷ್ಠೆಗಳಿಗೆ ತಡೆಯಿಲ್ಲ!
ತಡೆಯಿದ್ದರೂ ಮುನಿಸಿಲ್ಲ, ಮುನಿಸಿದರೂ ಒಂದರೆಕ್ಷಣ
ಮಕ್ಕಳ ಆಟ, ಆಟದೊಳಗೊಂದು ಆಟ, ಪಿಕಲಾಟ
ಬಲ್ಲ ಹಿರಿಯರಿಗೆಲ್ಲ ನೋಡುವಾಟ, ಆನಂದದಾಟ
ಹೌದು! ಸಂಚಿ ಹೊನ್ನಮ್ಮನ ನುಡಿ, ಹೇಳಿದ್ದಳು-
''ಬಾಲಕರಿಲ್ಲದ ಬಾಳಿದ್ಯಾತರ ಜನ್ಮ'' ಸಾರ್ವಕಾಲಿಕ
ಮಕ್ಕಳು ನಕ್ಕರೆ ಹಾಲ್ಗೊರೆ ಉಕ್ಕಿದಂತೆ, ಮತ್ತೆ
ಮಕ್ಕಳು ಅತ್ತರೆ ಕರುಳು ಕಿತ್ತುಬಂದಂತೆ
ಮಕ್ಕಳು ಮುಗ್ಧರು, ಸತ್ಯವಂತ ದೇವರುಗಳು
ತಿಳಿದವರು ಹೇಳುವರು, ಇಂದಿನ ಮಕ್ಕಳೇ
ಮುಂದಿನ ಪ್ರಜೆಗಳು, ಹೆಸರ ನುಳಿಸುವವರು
ಆದರೆ, ನಾವು ತಿಳಿದ ಹಿರಿಯರು ಮಾಡುವುದೇನು?
ತಿಳಿದೂ ತಿಳಿಯದೆ ಬೆಳೆಸುವೆವು ಸ್ವಾರ್ಥ ಅನ್ನವನಿತ್ತು
ಮತ್ತೆ ತಪ್ಪಿದೂಡುವೆವು ಭ್ರಷ್ಟಸಂಸ್ಕೃತಿಯ ಕೊಚ್ಚೆಗುಂಡಿಗೆ
ಮಕ್ಕಳೇ, ಎಚ್ಚರಿಕೆ, ಬೆಳೆಯಿರಿ, ಬೆಳೆಸಿರಿ
ಜ್ಞಾನ ಸಂಪತ್ತನ್ನು; ತೊಳೆಯಿರಿ, ತೊಳೆಸಿರಿ
ನಮಗೊದಗುವ, ಒದಗಿದ ಭ್ರಷ್ಟಾಚಾರವೆಂಬ ಕೊಳೆಗಳನ್ನು

**- ಟಿ.ಎಸ್. ನಾಗರಾಜ ಉಪಾಧ್ಯಾಯ**
ವಾಮಂಜೂರು

## Happiness!!

"Happiness in life depends on how we perceive it. That is why there are some happy beggars and some sad millionaires in the world"

**ಹಂಸ ಧ್ವನಿ - 3**

# ಪಂಚಪ್ರಧಾನ ಪ್ರಾಥಮಿಕ ವಾಸ್ತು ನಿಯಮಗಳು

**ಹಂದಾಡಿ ಸತ್ಯನಾರಾಯಣ ರಾವು**

1. ರಸ್ತೆಗಿಂತ ಮನೆಯೆತ್ತರವಿರಬೇಕು. ಪೇಸಿಂಗ್ ಅಂದರೆ ಮನೆಗೆ ಸಂಬಂಧ ಪಟ್ಟಿದ್ದು. ಈಸ್ಟ್ ಪೇಸಿಂಗ್ ಮನೆ ಸಿಂಹದ್ವಾರ ಪೂರ್ವ ದಿಕ್ಕನ್ನು ನೋಡುವುದು. ಹಾಗೆ ಎಂಟ್ರನ್ಸ್ ಅಂದರೆ ಮನುಷ್ಯರಿಗೆ ಸಂಬಂಧಪಟ್ಟಿದ್ದು. ಈಸ್ಟ್ ಎಂಟ್ರನ್ಸ್ ಅಂದರೆ ಮನುಷ್ಯರು ಮನೆ ಪಶ್ಚಿಮ ಸಿಂಹ ದ್ವಾರದಿಂದ ಪೂರ್ವಮುಖ್ಯವಾಗಿ ಒಳ ಹೋಗುವುದು.
2. ಮನೆ ನಾಲ್ಕು ಸುತ್ತಲೂ (ಕಾಂಪೌಂಡ್ ಒಳಗಡೆ) ನಡೆಯಾಡಲು ಜಾಗವಿರಬೇಕು. ಪೂರ್ವ, ಉತ್ತರವಂತೂ ಕಡ್ಡಾಯ. ಮನೆಗೆ ಪೂರ್ವ, ಉತ್ತರಗಳಲ್ಲಿ ರಸ್ತೆಯಿದ್ದರೆ ಉತ್ತಮ.
3. ಮನೆಯನ್ನು ಡೈಮಂಡ್ ಅಥವಾ ಗಾಲಿ ಪಪಿ ಆಕಾರವಾಗಿ ಊಹಿಸಿಕೊಂಡಾಗ ಶೀರ್ಷ ಭಾಗ ನೈಋತ್ಯ ಅತ್ಯುನ್ನತ ವಾಗಿ (ಎಲ್ಲ ಮೂಲೆಗಿಂತ ಎತ್ತರ) ಆಗ್ನೇಯ, ವಾಯವ್ಯ, ಮಧ್ಯಮವಾಗಿಯೂ, ಈಶಾನ್ಯ (ಎಲ್ಲ ಮೂಲೆಗಳಿಗಿಂತ) ತಗ್ಗಾಗಿಯೂ ಇರಬೇಕು.
4. ಬಾವಿ, ನೀರಿನ ಸಂಪು, ದೇವರಕೋಣೆ ಈಶಾನ್ಯದಲ್ಲಿಯೂ, ಓವರ್ ಹೆಡ್ ಟ್ಯಾಂಕು, ಶಯನ ಮಂದಿರ ನೈರುತ್ಯ ದಲ್ಲಿಯೂ, ಅಡುಗೆಯ ಕೋಣೆಯು ಆಗ್ನೇಯ ದಲ್ಲಿಯೂ, ಶೌಚಾಲಯ ವಾಯುವ್ಯದಲ್ಲಿಯೂ (ಉತ್ತರ, ದಕ್ಷಿಣವಾಗಿ) ಇರಬೇಕು.
5. ಮೆಟ್ಟಿಲು (ಸ್ಟೇರ್ ಕೇಸ್) ಪಶ್ಚಿಮ, ದಕ್ಷಿಣ ಭಾಗಗಳಲ್ಲಿ, ಉತ್ತರದಿಂದ ದಕ್ಷಿಣಕ್ಕೆ, ಪೂರ್ವದಿಂದ ಪಶ್ಚಿಮಕ್ಕೆ ಮೇಲುಮುಖವಾಗಿ (ಅಪ್‌ವಾರ್ಡ್ಸ್) ಇರಬೇಕು. ಮೇಲಿನಿಂದ ಕೆಳಗಿಳಿಯುವಾಗ ಪ್ರದಕ್ಷಿಣಾ ಮಾರ್ಗವಾಗಿ ಇರಬೇಕು.

ಸರ್ದಾರ್ : ನಮ್ಮ ಅಜ್ಜ ಯುದ್ಧದಲ್ಲಿ 50 ಜನರ ಕಾಲು ಮತ್ತು ಕೈ ಕಡಿದಿದ್ದಾರೆ ಗೊತ್ತಾ ?

ಗುಂಡ : ತಲೆ ಕಡಿದಿಲ್ವಾ?

ಸರ್ದಾರ್ : ಅದನ್ನು ಯಾರೋ ಮೊದಲೇ ಕಡಿದಿದ್ರಂತೆ.

# ''ಬ್ರಾಹ್ಮಣ-ಬ್ರಾಹ್ಮಣ್ಯ'' - ಒಂದು ಪರಿಕಲ್ಪನೆ

ಪ್ರೊ॥ ಕೆ.ಪಿ. ಪುತ್ತೂರಾಯ

'ಬ್ರಾಹ್ಮಣ' ಮತ್ತು 'ಬ್ರಾಹ್ಮಣ್ಯ' ಒಂದಕ್ಕೊಂದು ಪೂರಕವಾಗಿರಬೇಕಾದ ವಿಷಯಗಳಾದರೂ, ಭಿನ್ನ-ಭಿನ್ನವಾದ ಪರಿಕಲ್ಪನೆಗಳು. 'ಬ್ರಾಹ್ಮಣ'ವೆಂಬುದು ಒಂದು 'ಜಾತಿ' ಸೂಚಕ ಪದ. ಆದರೆ 'ಬ್ರಾಹ್ಮಣ್ಯ'ವೆಂಬುದು ಒಂದು 'ನೀತಿ' ಸೂಚಕ ಪದ; ಗುಣ-ಸ್ವಭಾವ, ಸಂಸ್ಕಾರ ಸಂಸ್ಕೃತಿ ಸೂಚಕ ಪದ. ಬ್ರಾಹ್ಮಣ್ಯ ಅಥವಾ ಬ್ರಾಹ್ಮಣತ್ವ ಒಂದು ಜೀವನ ಕ್ರಮ: ಜೀವನ ವಿಧಾನ (ಗಚಿಥ ಟ್ಪ ಔಜ್ಪಿಥಿ) ಬ್ರಾಹ್ಮಣರಾಗಿ ಹುಟ್ಟಿದವರೆಲ್ಲರಲ್ಲೂ, ಬ್ರಾಹ್ಮಣ್ಯ ಇರಲೇ ಬೇಕೆಂದಿಲ್ಲ. ಅಂತೆಯೇ ಬ್ರಾಹ್ಮಣೇತರರಲ್ಲೂ ಬ್ರಾಹ್ಮಣ್ಯ ಇರಬಾರದೆಂದೇನಿಲ್ಲ; ನಮ್ಮ ಸಮಾಜದಲ್ಲಿ ಬ್ರಾಹ್ಮಣ್ಯವಿಲ್ಲದ ಬ್ರಾಹ್ಮಣರೂ ಇದ್ದಾರೆ; ಬ್ರಾಹ್ಮಣ್ಯ ತುಂಬಿರುವ ಅನ್ಯ ಜಾತಿಯವರೂ ಇದ್ದಾರೆ. ಬ್ರಾಹ್ಮಣರ ಜಾತಿಯಲ್ಲಿ ಹುಟ್ಟಿದವರೆಲ್ಲ ಬ್ರಾಹ್ಮಣರೇನೋ ಸರಿ. ಆದರೆ ಬ್ರಾಹ್ಮಣ್ಯದ ಪರಿಪಾಲನೆ ಅವರ ಜನುಮಕ್ಕೆ ಪರಿಪೂರ್ಣತೆಯನ್ನು ನೀಡಿ. ಅವರ ಜಾತಿಗೆ ಶೋಭೆಯನ್ನು ತರಬಲ್ಲುದಾದರೂ, 'ಬ್ರಾಹ್ಮಣ್ಯ' ಅವರಿಗೆ ಮಾತ್ರ ಸೀಮಿತವಾದ ಅವರ ಸೊತ್ತು ಮಾತ್ರವೇನೂ ಅಲ್ಲ. ಯಾವ ಜಾತಿಯವರೂ, ಯಾವಾಗ ಬೇಕಿದ್ದರೂ ಬ್ರಾಹ್ಮಣ್ಯವನ್ನು ಗಳಿಸಿಕೊಳ್ಳಬಹುದು ಹಾಗೂ ತಮ್ಮ ಜೀವನದಲ್ಲಿ ಬಳಸಿಕೊಳ್ಳಬಹುದು.

ಯಾರು ಬ್ರಾಹ್ಮಣ?

'ಬ್ರಾಹ್ಮಣ' ಎಂಬ ಹೆಸರು 'ಬ್ರಹ್ಮ' ಎಂಬ ಶಬ್ದದಿಂದ ಉಗಮವಾಗಿದ್ದು, ಬ್ರಾಹ್ಮಣರೆಂದರೆ ಬ್ರಹ್ಮವನ್ನು ಆರಾಧಿಸುವವರು ಎಂದು ಇತಿಹಾಸದಲ್ಲಿ ದಾಖಲಾಗಿದೆ. ''ಬ್ರಹ್ಮ ಜಾನಾ ನೀತಿ ಬ್ರಾಹ್ಮಣಃ'' ''ಬ್ರಹ್ಮ ಅಣತೀತಿ ಬ್ರಾಹ್ಮಣಃ''; ಅಂದರೆ ಪರಬ್ರಹ್ಮ ಪರಮಾತ್ಮನನ್ನು ಅರಿತುಕೊಳ್ಳುವವನು ಬ್ರಾಹ್ಮಣ. ಸಾಮಾಜಿಕ ಹಾಗೂ ಸರಕಾರದ ದೃಷ್ಟಿಯಲ್ಲಿ ಬ್ರಾಹ್ಮಣ ವಂಶದಲ್ಲಿ ಜನಿಸಿದವರೆಲ್ಲ ಮತ್ತು ಮಾತ್ರವಷ್ಟೆ ಬ್ರಾಹ್ಮಣರೆಂದೆನಿಸಿಕೊಂಡರೂ, ಧಾರ್ಮಿಕ ದೃಷ್ಟಿ ಯಿಂದ ನೋಡಿದರೆ, ಜನ್ಮದಿಂದಲ್ಲ, ಕರ್ಮಾನುಷ್ಠಾನದಿಂದ ಮಾತ್ರ ಬ್ರಾಹ್ಮಣರು ಬ್ರಾಹ್ಮಣತ್ವವನ್ನು ಪಡೆಯುತ್ತಾರೆ. ''ಜನನಾಂ ಜಾಯತೆ ಜಂತುಃ, ಕರ್ಮಣಾಂ ಜಾಯತೇ ದ್ವಿಜಃ'' ಎಂಬ ಮಾತಿನಂತೆ, ಹುಟ್ಟಿನಿಂದ ಬ್ರಾಹ್ಮಣನೂ ಎಲ್ಲರಂತೆ ಒಂದು ಜೀವ; ಸತ್ಕರ್ಮ ಮತ್ತು ಸದಾಚಾರಗಳಿಂದ ಮಾತ್ರ ದ್ವಿಜನಾಗುತ್ತಾನೆ. ಬ್ರಾಹ್ಮಣರು ಪರಿಪಾಲಿಸಬೇಕಾದ ಕರ್ಮಾನುಷ್ಠಾನಗಳನ್ನು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಅವುಗಳೆಂದರೆ ''ಶಮೋ ದಮಃ ತಪಃ ಶೌಚಂ, ಕ್ಷಾಂತಿ ಅರ್ಜವಂ ಏವಚ ಜ್ಞಾನವಿಜ್ಞಾನ ಮಸ್ತಿಕ್ಯಂ ಬ್ರಹ್ಮ ಕರ್ಮ ಸ್ವಭಾವಜಂ''. ಅರ್ಥಾಥ್ ತನ್ನನ್ನು ತಾನೆ ಗೆದ್ದುಕೊಂಡು, ಶಾಂತಿಪ್ರಿಯನಾಗಿ, ಸರ್ವರ ಹಿತಚಿಂತಕನಾಗಿ, ಇಂದ್ರಿಯ ನಿಗ್ರಹ, ತಪಸ್ಸು, ಸ್ವಚ್ಛತೆ, ತಾಳ್ಮೆ, ಪ್ರಾಮಾಣಿಕತೆ, ಜ್ಞಾನಗಳನ್ನು ಬೆಳೆಸಿಕೊಂಡು, ಆಸ್ತಿಕನಾಗಿ ಬಾಳೋದು ಬ್ರಾಹ್ಮಣನ ಕರ್ತವ್ಯಗಳು. ''ಅಧ್ಯಯನ - ಅಧ್ಯಾಪನಂ, ಯಜನಂ - ಯಾಜನಾ ತಥಾ ದಾನಂ - ಪ್ರತಿ ಗ್ರಹಂಚೈವ ಬ್ರಾಹ್ಮಣಾನಾಮ್ ಕಲ್ಪಯತ್'' (ಮನು 1-88) ಎಂಬ ಮಾತಿನಂತೆ, ಕಲಿಯುವಿಕೆ (ವಿದ್ಯಾರ್ಜನೆ), ಕಲಿಸುವಿಕೆ (ಜ್ಞಾನದಾಸೋಹ) ಯಜ್ಞಗ್ಗಳನ್ನು ಮಾಡೋದು ಮತ್ತು ಮಾಡಿಸೋದು ಹಾಗೂ ದಾನ ಗೈಯುವುದು ಮತ್ತು ದಾನಗಳನ್ನು ಸ್ವೀಕರಿಸೋದು ಬ್ರಾಹ್ಮಣನ ಜವಾಬ್ದಾರಿಗಳು, ವೇದಾಧ್ಯಯನ ಮತ್ತು ಜ್ಞಾನಾರ್ಜನೆ ಬ್ರಾಹ್ಮಣನ ಆಸಕ್ತಿ. ಕಾದಾಡೋದು ಕ್ಷತ್ರಿಯರ ಆಸಕ್ತಿಯಾದರೆ, ವ್ಯಾಪಾರ- ವ್ಯವಹಾರದಲ್ಲಿ ವೈಶ್ಯರಿಗೆ ಅಭಿರುಚಿ. ಅಂತೆಯೇ ದುಡಿಮೆ ಶೂದ್ರರ ಗುಣಸ್ವಭಾವ. ಈ ತತ್ವಕ್ಕನುಸಾರವಾಗಿಯೇ ಶ್ರೀಕೃಷ್ಣ ಪರಮಾತ್ಮ ಅವರವರ ಗುಣಸ್ವಭಾಗಳನ್ನಾಧರಿಸಿ, ಜನರನ್ನು ನಾಲ್ಕು ವರ್ಣಗಳನ್ನಾಗಿ ವಿಂಗಡಿಸಿದನೇ ಹೊರತು ಅವರು ಹುಟ್ಟಿದ ಜಾತಿಯನ್ನಾಧರಿಸಿ ಅಲ್ಲ (''ಚಾತುವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ'' - ಭಗವದ್ ಗೀತೆ 4-13). ಇಲ್ಲಿ ವರ್ಣ್ಯಂ ಎಂದರೆ ಜನರ ಚರ್ಮದ ಬಣ್ಣವೆಂಬ ಅರ್ಥವಲ್ಲ; ಅವರ ಗುಣಸ್ವಭಾವವೆಂಬ ಅರ್ಥ. ''ಅವನ ನಿಜವಾದ ಬಣ್ಣ ಬದಲಾಯಿತು'' ಎಂದರೆ. ''ಅವನ ಗುಣ ಸ್ವಭಾವದ ಅರಿವಾಯಿತು'' ಎಂದಂತೆ.

ಭಗವದ್‌ಗೀತೆಯುದ್ದಕ್ಕೂ, ಶ್ರೀಕೃಷ್ಣನ ಬಾಯಿಯಲ್ಲಿ 'ಜಾತಿ'ಎಂಬ ಪದ ಪ್ರಯೋಗವೇ ಆಗಲಿಲ್ಲ. ಜನರ ಗುಣ ಸ್ವಭಾವ, ಶಕ್ತಿ ಸಾಮರ್ಥ್ಯ, ಆಸಕ್ತಿ ಅಭಿರುಚಿಗಳಿಗನುಸಾರ ವಾಗಿಯೇ ವರ್ಣಾಶ್ರಮ ಸೃಷ್ಟಿಯಾಯಿತೇ ವಿನಹ, ಜಾತ್ಯಾಧಾರಿತವಾಗಿ ಅಲ್ಲ, ಅಂತೆಯೇ ಅಜ್ಞಾನದ ವಿರುದ್ಧ ಕೆಲಸ ಮಾಡುವವರು ಬ್ರಾಹ್ಮಣರಾದರು; ಅನ್ಯಾಯದ ವಿರುದ್ಧ ಹೋರಾಡುವವರು ಕ್ಷತ್ರಿಯರಾದರು; ಅಭಾವ ಅಥವಾ ಕೊರತೆಯ ವಿರುದ್ಧ ಶ್ರಮಿಸುವವರು ವೈಶ್ಯರಾದರು ಹಾಗೂ ಆಲಸ್ಯ ಅಥವಾ ಸೋಮಾರಿತನದ ವಿರುದ್ಧ ದುಡಿಯುವವರು ಶೂದ್ರರಾದರು. ಈ ಸಿದ್ಧಾಂತ ಎಲ್ಲಾ ಕಾಲಕ್ಕೂ ಎಲ್ಲಾ ದೇಶಗಳಿಗೂ ಅನ್ವಯ. ಒಟ್ಟಿನಲ್ಲಿ ನಿಜವಾದ ಅರ್ಥದಲ್ಲಿ, ಜ್ಞಾನವಿಲ್ಲದವ ಬ್ರಾಹ್ಮಣನಾಗಲಾರ, ಧೈರ್ಯ-ಶೂರತನ ವಿಲ್ಲದವ ಕ್ಷತ್ರಿಯನಾಗಲಾರ, ವ್ಯಾಪಾರ ಗೈಯುವ ಪ್ರವೃತ್ತಿ ಇಲ್ಲದವ ವೈಶ್ಯನಾಗಲಾರ ಹಾಗೂ ದುಡಿಯುವ ಮನಸ್ಸಿಲ್ಲದ ಸೋಮಾರಿ, ಶೂದ್ರನೂ ಆಗಲಾರ. ಆದರೆ ಇವೆಲ್ಲವೂ, ಎಲ್ಲ ವರ್ಣದವರೂ

ಬದಲಾಯಿಸಿಕೊಳ್ಳಬಹುದಾದ ಒಂದು ಮನೋಸ್ಥಿತಿ ಅಷ್ಟೆ. ಆದುದರಿಂದಲೇ ಶ್ರೀಕೃಷ್ಣ ಹೇಳಿದ ''ತಸ್ಯಾ ಕರ್ತಾರ ಮಪಿ ಮಾಂ ವಿದ್ಧಕರ್ತಾರ ಮವ್ಯಯಮ್''. ಅರ್ಥಾತ್, ತಮ್ಮ ಗುಣ ಸ್ವಭಾವ ಗಳನ್ನು ಬದಲಿಸಿಕೊಂಡರೆ, ಯಾರೂ ಬೇಕಾದರೂ, ಹುಟ್ಟಿನಿಂದ ತಮ್ಮ ಜಾತಿಯ ಹೊರತಾಗಿ, ಯಾವ ವರ್ಗ-ವರ್ಣವನ್ನು ಸೇರಿಕೊಳ್ಳಬಹುದು. ಮೂಲತಃ ಎಲ್ಲರೂ ಚಾತುವರ್ಣೀಯರೇ, ಅಜ್ಞಾನಿ, ಅಧರ್ಮಿ ಬ್ರಾಹ್ಮಣನೆಂದು ಕರೆಸಿಕೊಳ್ಳಲು ಯೋಗ್ಯ ನಲ್ಲ. ಅಂತೆಯೇ ಓರ್ವ ಶೂದ್ರ ಅಥವಾ ಅಜ್ಞಾನದ ಸ್ಥಿತಿಯಲ್ಲಿ ರುವವನು ಕೂಡಾ ಸ್ವಾಧ್ಯಾಯ, ಸ್ವಪ್ರಯತ್ನದಿಂದ ಮತ್ತು ಸಮರ್ಥ ಗುರುವಿನ ಮಾರ್ಗದರ್ಶನದಿಂದ ಬ್ರಹ್ಮಜ್ಞಾನಿಯಾಗ ಬಲ್ಲ; ಬ್ರಾಹ್ಮಣ ಸ್ಥಿತಿಯನ್ನು ಏರಬಲ್ಲ. ಹೀಗಾಬೇಕೆಂಬುದೇ ಗೀತೆಯ ಮೂಲಕ ತಿಳಿಸಿದ ಶ್ರೀಕೃಷ್ಣನ ಆಶಯ. ಯಾವ ವರ್ಣದವರೂ ಶಾಶ್ವತವಾಗಿ ಅದೇ ವರ್ಗದವರಾಗಿ ಮುಂದುವರಿಯ ಬೇಕೆಂಬುದು ಅವನಿಗೆ ಬೇಕಿಲ್ಲವಾಗಿತ್ತು.

ಈ ಹಿನ್ನೆಲೆಯಲ್ಲಿ 'ಬ್ರಾಹ್ಮಣ್ಯ' ಅಥವಾ 'ಬ್ರಾಹ್ಮಣಿಕೆ' ಬರೇ ಬ್ರಾಹ್ಮಣರಿಗೆ ಮಾತ್ರ ಸೀಮಿತವಾದ ಸೊತ್ತಾಗಿ ಉಳಿಯದೆ, ಬ್ರಾಹ್ಮಣ್ಯೇತರರು ಕೂಡಾ ಗಳಿಸಿಕೊಳ್ಳಬಹುದಾದ ಸಂಸ್ಕಾರವಾಯಿತು. ಬ್ರಾಹ್ಮಣ್ಯಕ್ಕೆ ಜಾತಿ ಇಲ್ಲ. ಅದು ಜಾತ್ಯತೀತ. ಗಾಂಧೀವಾದಗಳನ್ನು ಒಪ್ಪುವವರು ಗಾಂಧೀವಾದಿಗಳಾಗುತ್ತಾರೆ. ಅಂತೆಯೇ ಜಾತಿ ಏನೇ ಇರಲಿ, ತಮ್ಮ ಬಾಳಲ್ಲಿ ಬ್ರಾಹ್ಮಣ್ಯವನ್ನು ಅಳವಡಿಸಿಕೊಂಡು ಆಚರಿಸುವವರು ಬ್ರಾಹ್ಮಣತ್ವವನ್ನು ಪಡೆಯುತ್ತಾರೆ. ಬ್ರಾಹ್ಮಣ್ಯ ಹುಟ್ಟಿನಿಂದಲೂ ಅಲ್ಲ. ಬರೇ ವೇದಾಧ್ಯಯನದಿಂದಲೂ ಅಲ್ಲ, ಸದಾಚಾರ-ಸದ್ಗುಣ-ಸತ್ಕಾರ್ಯಗಳಿಂದ ಪ್ರಾಪ್ತವಾಗುತ್ತದೆ. ಸದ್ವಿಚಾರ-ಆಚಾರಗಳ ಸಂಗಮವೇ ಬ್ರಾಹ್ಮಣ್ಯ. ಮೌಲ್ಯಾಧಾರಿತ ಕರ್ಮಾನುಷ್ಠಾನಗಳಿಂದ ಯಾರು ಬೇಕಾದರೂ, ಬ್ರಾಹ್ಮಣ್ಯವನ್ನು ಗಳಿಸಿಕೊಳ್ಳಬಹುದು. ಹಾಗೆ ನೋಡಿದರೆ, ಬ್ರಾಹ್ಮಣ್ಯ, ಬ್ರಾಹ್ಮಣರ ಕೊಡುಗೆಯಲ್ಲ. ಮಹರ್ಷಿ ವಿಶ್ವಾಮಿತ್ರರು ಹುಟ್ಟಿನಿಂದ ಬ್ರಾಹ್ಮಣರಲ್ಲ, ಕ್ಷತ್ರಿಯರು. ಆದರೆ ತಮ್ಮ ತಪೋಬಲದಿಂದ ಬ್ರಾಹ್ಮಣರಿಗೇ ಗಾಯತ್ರಿ ಮಂತ್ರವನ್ನು ಉಪದೇಶಿಸಿದ ಬ್ರಹ್ಮಜ್ಞಾನಿಯಾಗುತ್ತಾರೆ. ವೇದಗಳನ್ನು ಪುನರ್ ವಿಂಗಡಿಸಿದ ವೇದವ್ಯಾಸ ಮಹರ್ಷಿಗಳು ಮೀನುಗಾರರ ಕುಟುಂಬದವರು. ಶ್ರೀಮದ್ ರಾಮಾಯಣ ಮಹಾಕಾವ್ಯವನ್ನು ಬರೆದ ವಾಲ್ಮೀಕಿಯೂ ವ್ಯಾಧ(ಬೇಡ)ರ ಜಾತಿಗೆ ಸೇರಿದವರು. 'ಬ್ರಾಹ್ಮಣ' ಎಂಬ ಮಹಾಗ್ರಂಥವನ್ನು ಬರೆದ ಐತರೇಯ ಮುನಿಯು ಬ್ರಾಹ್ಮಣನಾಗಿರಲಿಲ್ಲ. ಬ್ರಾಹ್ಮಣರೇ ಮೊದಲಾಗಿ ಹಿಂದುಗಳೆಲ್ಲ ನಿತ್ಯಪೂಜಿಸುವ ಶ್ರೀ ರಾಮಚಂದ್ರ ಕ್ಷತ್ರಿಯ; ಶ್ರೀಕೃಷ್ಣ ಯಾದವ; ಹನುಮಂತ ವಾನರ, ವ್ಯತಿರಿಕ್ತವಾಗಿ ಜಾತಿಯಲ್ಲಿ ಬ್ರಾಹ್ಮಣನಾಗಿ ಹುಟ್ಟಿದರೂ ಕರ್ಮಭ್ರಷ್ಟನಾದ ರಾವಣ ಬ್ರಾಹ್ಮಣ್ಯವನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ, ಶ್ರೀರಾಮನಿಂದ ಸಂಹಾರಗೊಳ್ಳಬೇಕಾಯಿತು. ಅಂತೆಯೇ ಜನ್ಮದಿಂದ ಬ್ರಾಹ್ಮಣ ವಂಶದಲ್ಲಿ ಜನಿಸದಿದ್ದರೂ,ತನ್ನ ಸತ್ಕಾರ್ಯ-ಸದ್ಗುಣ-ಸದಾಚಾರಗಳಿಂದ, ಬಾಳಿದ ಮಹಾತ್ಮ ಗಾಂಧಿಯವರು ಎಲ್ಲಾ ವರ್ಗ-ವರ್ಣದವರೂ ಗೌರವಿಸುವ ರಾಷ್ಟ್ರಪಿತರಾದರು. ಒಟ್ಟಿನಲ್ಲಿ ಗುಣಸ್ವಭಾವಗಳೇ ಬ್ರಾಹ್ಮಣ್ಯವನ್ನು ನಿರ್ಧರಿಸುವ ವಿಷಯಗಳೇ ಹೊರತು, ವ್ಯಕ್ತಿಯ ಜಾತಿಯಲ್ಲ ವೆಂಬುದು ಸ್ಪಷ್ಟವಾಯಿತು.

### ಯಾವುದು ಬ್ರಾಹ್ಮಣ್ಯ ?

ಉತ್ಕೃಷ್ಟವಾದ ಜೀವನ ಧರ್ಮವೇ ಬ್ರಾಹ್ಮಣ್ಯ. ಮೌಲ್ಯ ಗಳನ್ನು ಸಾಕ್ಷಾತ್ಕಾರಗೊಳಿಸಿ ಸರ್ವಗುಣ ಸಂಪನ್ನರಾಗುವುದೇ ಬ್ರಾಹ್ಮಣ್ಯದ ಪರಿಕಲ್ಪನೆ. ಜಾತಿ ಮತ ಭೇದವಿಲ್ಲದೆ ಎಲ್ಲರೂ ಎಲ್ಲಾ ಕಾಲದಲ್ಲೂ ಅನುಸರಿಸಬಹುದಾದ ಸಂಸ್ಕಾರವಿದು. ಬರೇ ಮಡಿವಂತಿಕೆ ಇಲ್ಲವೇ ಗೊಡ್ಡು ಸಂಪ್ರದಾಯಗಳು ಬ್ರಾಹ್ಮಣ್ಯದ ಸೂತ್ರಗಳಲ್ಲ.

### ಬ್ರಾಹ್ಮಣ್ಯದ ಗುಣಲಕ್ಷಣಗಳೆಂದರೆ

1) ವಿದ್ಯಾವಂತನಾಗಿ, ಜ್ಞಾನಿಯಾಗಿ, ಸುಶಿಕ್ಷಿತನಾಗಿರೋದರ ಜತೆ ಸುಸಂಸ್ಕೃತನಾಗಿರೋದು ಬ್ರಾಹ್ಮಣ್ಯ. ಕಾರಣ ಶಿಕ್ಷಣ ಬೇರೆ, ಸಂಸ್ಕಾರ ಬೇರೆ. ಶಿಕ್ಷಣವೆಂದರೆ ಬರೇ ವಿಷಯ ಜ್ಞಾನ. ಆದರೆ ಸಂಸ್ಕಾರವೆಂದರೆ ಮೌಲ್ಯಗಳ ಪರಿಜ್ಞಾನ. ಶಿಕ್ಷಣ ಶಾಲಾ ಕಾಲೇಜುಗಳಿಂದ ಪ್ರಾಪ್ತವಾದರೆ, ಸಂಸ್ಕಾರ ಸುಸಂಸ್ಕೃತರಾದ ಹೆತ್ತವರಿಂದಲೂ, ಉತ್ತಮರ ಸಂಸರ್ಗ ದಿಂದಲೂ ಪ್ರಾಪ್ತವಾಗುತ್ತದೆ.

2) ವಿದ್ವಾಂಸನಾಗಿದ್ದರೂ, ವಿನಯಶೀಲನಾಗಿರೋದು, ಸಮರ್ಥನಾಗಿದ್ದರೂ ನಿಗರ್ವಿಯಾಗಿರೋದು ಬ್ರಾಹ್ಮಣ್ಯ.

3) ಸರಳತೆ, ಸಾತ್ವಿಕ ಸ್ವಭಾವ, ಸಜ್ಜನಿಕೆ, ಸಹೃದಯತೆ, ಸಹನೆ ಬ್ರಾಹ್ಮಣ್ಯದ ಲಕ್ಷಣಗಳು.

4) ಸಂಭಾವಿತನಾಗಿರೋದು, ಸತ್ಯವಂತನಾಗಿರೋದು, ನಿರುಪದ್ರವಿಯಾಗಿರೋದು, ಸ್ನೇಹಪ್ರಿಯನಾಗಿರೋದು ಬ್ರಾಹ್ಮಣ್ಯದ ಸಿದ್ಧಾಂತಗಳು.

5) ಸಮದೃಷ್ಟಿ-ಪ್ರೇಮದೃಷ್ಟಿ-ವಿಶಾಲ ದೃಷ್ಟಿ ಹಾಗೂ ವೈಜ್ಞಾನಿಕ ಮನೋಭಾವ ಬ್ರಾಹ್ಮಣ್ಯದ ಸೂತ್ರಗಳು.

6) ಪ್ರಾಮಾಣಿಕತೆ, ಇಂದ್ರಿಯ ನಿಗ್ರಹ ಮತ್ತು ಬಾಹ್ಯಾಂತ ರಂಗದ ಶುಚಿತ್ವ ಬ್ರಾಹ್ಮಣದ ಗುಣಲಕ್ಷಣಗಳು.

7) ಪರೋಪಕಾರ, ಲೋಕಕಲ್ಯಾಣದ ಚಿಂತನೆಯೇ ಬ್ರಾಹ್ಮಣ್ಯ. ''ಸರ್ವೇ ಜನಾಃ ಸುಖಿನೋ ಭವಂತು'' ''ಲೋಕಾ ಸಮಸ್ತಾನಿ ಸುಖಿನೋ ಭವಂತು'' ಎಂಬುದೇ ಬ್ರಾಹ್ಮಣ್ಯದ ಪರಿಕಲ್ಪನೆ.

8) ನಿಷ್ಠೆ-ನೀತಿ-ನಿಯಮ-ನಿಯತ್ತುಗಳೇ ಬ್ರಾಹ್ಮಣತ್ವದ ಸಿದ್ಧಾಂತಗಳು.

ಬ್ರಾಹ್ಮಣರಿಗೆ ಕಿವಿಮಾತು

ಕೇವಲ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕೆ ಯಾರೂ ಬ್ರಾಹ್ಮಣ್ಯವನ್ನು ಮೈಗೂಡಿಸಿಕೊಂಡ ಬ್ರಾಹ್ಮಣರಾಗೋದಿಲ್ಲ. ಬ್ರಾಹ್ಮಣರು ತಮ್ಮ ಜೀವನದಲ್ಲಿ ಬ್ರಾಹ್ಮಣ್ಯವನ್ನು ಬೆರೆಸಿಕೊಳ್ಳಲೇ ಬೇಕು. ಬ್ರಾಹ್ಮಣ್ಯವಿಲ್ಲದ ಬ್ರಾಹ್ಮಣ ಹೂರಣವಿಲ್ಲದ ಹೋಳಿಗೆಯಂತೆ; ಪರಿಮಳವಿಲ್ಲದ ಹೂವಿನಂತೆ. ಮಾತ್ರವೇ ಅಲ್ಲ, ಬ್ರಾಹ್ಮಣ್ಯವನ್ನು ಅನುಸರಿಸದ ಬ್ರಾಹ್ಮಣ, ತುಂಬಾ ಅಪಾಯಕಾರೀ ವ್ಯಕ್ತಿ. ಕಾರಣ ಆತ ಬುದ್ಧಿವಂತ ಬೇರೆ. ಇಂತಹ ವ್ಯಕ್ತಿಗೆ ಬ್ರಾಹ್ಮಣೇತರರಿಂದ ಕೂಡ ಯಾವ ಗೌರವವೂ ದೊರಕಲಾರದು. ಮೇಲಾಗಿ ಬ್ರಾಹ್ಮಣರಿಗೆ ವಿಶ್ವಾಸಗಳಿರಲಿ, ಆದರೆ ಅಂಧವಿಶ್ವಾಸಗಳು ಬೇಡ; ಒಳ್ಳೆಯ ನಂಬಿಕೆಗಳಿರಲಿ, ಆದರೆ ಮೂಢನಂಬಿಕೆಗಳು ಬೇಡ. ಬರೇ ಮಡಿ ಮಾಡಿಕೊಳ್ಳೋದು, ಒದ್ದೆ ಬಟ್ಟೆ ಉಟ್ಟುಕೊಳ್ಳೋದರಿಂದ ಮಾತ್ರಾ ಯಾರೂ ಬ್ರಾಹ್ಮಣರಾಗೋದಿಲ್ಲ. ಮಡಿ ಎಂದರೆ ಶುಭ್ರವಾದುದು, ನಿರ್ಮಲವಾದುದು ಎಂದಷ್ಟೆ ಅರ್ಥ. ಈ ಹಿನ್ನೆಲೆಯಲ್ಲಿ ಮೈಯ ಮಡಿವಂತಿಕೆಯ ಜೊತೆ, ಮಾನಸಿಕ ಮಡಿವಂತಿಕೆಯೂ ಬೇಕು, ಹೃದಯ ಶ್ರೀಮಂತಿಕೆಯೂ ಬೇಕು. ಬರೇ ದೃಷ್ಟಿ ಮಾತ್ರವಲ್ಲ. ಬ್ರಾಹ್ಮಣರ ದೃಷ್ಟಿಕೋನವೂ ಚೆನ್ನಾಗಿರಬೇಕು. ಆಹಾರದ ಜತೆ ವ್ಯವಹಾರವೂ ಚೆನ್ನಾಗಿರಬೇಕು. ಈ ದೃಷ್ಟಿಯಲ್ಲಿ ಸಸ್ಯಹಾರಿಗಳೆಲ್ಲ ಶ್ರೇಷ್ಠರೇ ಆಗಬೇಕೆಂದಿಲ್ಲ; ಮಾಂಸಹಾರಿಗಳೆಲ್ಲ ದುಷ್ಟರೇ ಆಗಬೇಕೆಂದಿಲ್ಲ. ಬ್ರಾಹ್ಮಣರ ನೋಟಕ್ಕಿಂತಲೂ ಅವರ ನಡತೆ ಮುಖ್ಯವಾಗುತ್ತದೆ. ಕಳ್ಳತನ-ಕೊಲೆ-ಸುಲಿಗೆ-ಮೋಸ- ವಂಚನೆ ಬ್ರಾಹ್ಮಣರಿಗೆ ಶೋಭೆಯಲ್ಲ; ಬ್ರಾಹ್ಮಣ್ಯದ ಲಕ್ಷಣವೂ ಅಲ್ಲ. ಉದ್ದುದ್ದ ನಾಮಗಳಿಂದ, ಅಡ್ಡಡ್ಡ ವಿಭೂತಿಗಳಿಂದ, ಮೈತುಂಬಾ ಮುದ್ರೆ ಗಂಧಲೇಪನಗಳಿಂದಲ, ಜರೀ ಪಂಚೆ-ಸಿಲ್ಕು ಶಲ್ಯಗಳಿಂದ ಯಾರೂ ಮಹಾಬ್ರಾಹ್ಮಣ ರಾಗೋದಿಲ್ಲ. ಬ್ರಾಹ್ಮಣರಿಗೆ ಆಡಂಬರವಲ್ಲ-ಆಚರಣೆ ಮುಖ್ಯ, ಬೋಧನೆಗಿಂತಲೂ ಪಾಲನೆಮುಖ್ಯ. ಆದುದರಿಂದ ಬ್ರಾಹ್ಮಣರಾದವರು ಬ್ರಾಹ್ಮಣ್ಯವನ್ನು ಗಳಿಸಿಕೊಳ್ಳಬೇಕು, ಗಳಿಸಿಕೊಂಡ ಬ್ರಾಹ್ಮಣ್ಯವನ್ನು ಉಳಿಸಿಕೊಳ್ಳಬೇಕು ಹಾಗೂ ಬೆಳೆಸಿಕೊಳ್ಳಬೇಕು.

ಅಂತೆಯೇ, ಜಾತೀಬಲ, ಜನಬಲ, ಸಂಖ್ಯಾಬಲ, ಧನಬಲ, ಅಧಿಕಾರಬಲವಿಲ್ಲದ ಈ ಕಾಲದಲ್ಲಿ, ಜ್ಞಾನವೊಂದೇ ಬ್ರಾಹ್ಮಣರಿಗೆ ಉಳಿದಿರುವ ಬಲ. ಈ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕು. ಇದು ತಮಗೆ ಗಾಯತ್ರೀ ಮಂತ್ರದ ಮೂಲಕ ಪ್ರಾಪ್ತವಾಗಿರುವ 'ಧೀ ಶಕ್ತಿ'ಯಿಂದ ಸಾಧ್ಯ. ''ವಸಂತ ಸಮಯ ಸಂಪ್ರಾಪ್ತೇ ಕಾಕ ಕಾಕಃ, ಪಿಕ ಪಿಕಃ'' ಎಂಬ ಮಾತಿನಂತೆ, ಪ್ರತಿಭೆಗೆ ತಕ್ಕ ಸ್ಥಾನಮಾನ ಲಭ್ಯವಾಗುತ್ತಲೇ ಇರುತ್ತದೆ.


ಮಾತ್ರವೇ ಅಲ್ಲ, ಬ್ರಾಹ್ಮಣರಾದವರು ಇತರ ಎಲ್ಲಾ ಬ್ರಾಹ್ಮಣೇತರರ ಜೊತೆ ಬೆರೆತು ಬಾಳುವ, ಅವರ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಳ್ಳುವ ಕಲೆಯನ್ನು ಕರಗತ ಮಾಡಿಕೊಳ್ಳಲೇ ಬೇಕಾಗುತ್ತದೆ. ಕಾರಣ ಬ್ರಾಹ್ಮಣೇತರರ ಸಹಾಯ-ಸಹಕಾರ-ಸಹಯೋಗವಿಲ್ಲದೆ, ಬ್ರಾಹ್ಮಣ ಬದುಕಲಾರ ಏನನ್ನೂ ಸಾಧಿಸಲಾರ. ಮೇಲಾಗಿ, ಸ್ಪರ್ಧಾತ್ಮಕವಾದ ಈ ದಿನಗಳಲ್ಲಿ ಬಾಳಿ ಬದುಕಬೇಕಾದರೆ, ಇತರ ವರ್ಣದವರಲ್ಲಿರುವ ಗುಣ ಸ್ವಭಾವಗಳನ್ನೂ ಬ್ರಾಹ್ಮಣನಾದವನು ಬೆರೆಸಿಕೊಳ್ಳಬೇಕು. ತನ್ನಲ್ಲಿರುವ ಜ್ಞಾನಬಲದೊಂದಿಗೆ, ಕ್ಷತ್ರಿಯರಲ್ಲಿರುವ ಧೈರ್ಯವನ್ನೂ, ವೈಶ್ಯರಲ್ಲಿರುವ ವ್ಯವಹಾರ ಜ್ಞಾನವನ್ನು, ಶೂದ್ರರಲ್ಲಿ ಕಾಣಬಹುದಾದ ದುಡಿಯುವ ಪ್ರವೃತ್ತಿಯನ್ನು ಸೇರಿಸಿಕೊಂಡರೆ, ಬ್ರಾಹ್ಮಣ ಯಾವ ಕೆಲಸವನ್ನು ಮಾಡಲೂ ಶಕ್ತನಾಗುತ್ತಾನೆ. ಹೊರಗಿನ ವೈರಿಗಳನ್ನು ಜಯಿಸಿದವನು ಕ್ಷತ್ರಿಯನಾದರೆ, ತನ್ನೊಳಗಿನ ವೈರಿಗಳನ್ನು ಜಯಿಸಿಕೊಂಡವನು ಮಾತ್ರ ನಿಜವಾದ ಬ್ರಾಹ್ಮಣ ನಾಗುತ್ತಾನೆ. ಸಂಸ್ಕಾರ-ಸ್ವಾಭಿಮಾನ- ಸ್ವಾವಲಂಬನೆ- ಸಂಘಟನೆ-ಸಹಕಾರಗಳೇ ಬ್ರಾಹ್ಮಣರಿಗೆ ಮೂಲ ಮಂತ್ರಗಳಾಗ ಬೇಕು.

ಒಟ್ಟಿನಲ್ಲಿ ಬ್ರಾಹ್ಮಣರೇ ಮೊದಲಾಗಿ, ಎಲ್ಲಾ ವರ್ಣದವರಲ್ಲೂ ಒಂದಿಷ್ಟು ''ಬ್ರಾಹ್ಮಣ್ಯ''ವನ್ನು ಮೆರೆದರೆ, ಸಮಾಜಕ್ಕೂ ಕ್ಷೇಮ; ದೇಶಕ್ಕೂ ಕ್ಷೇಮ.

ಓಂ ಶಾಂತಿ ಶಾಂತಿ ಶಾಂತಿಃ

ಗಮನಿಸಿ:

## ಮಹಿಳಾ ವಿಭಾಗದ ನೇತೃತ್ವದಲ್ಲಿ ವಧು-ವರಾನ್ವೇಷಣೆ



ಆನಂದ ಬಳಗದ ಮಹಿಳಾ ವಿಭಾಗದವರು ಕಳೆದ ಕೆಲವಾರು ವರ್ಷಗಳಿಂದ ಬಳಗದ ಸದಸ್ಯರ ಅನುಕೂಲಕ್ಕಾಗಿ ವಧು-ವರಾನ್ವೇಷಣೆ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದ್ದಾರೆ.ಈ ಕಾರ್ಯಕ್ರಮದ ಪ್ರಯೋಜನವನ್ನು ಈಗಾಗಲೇ ನೂರಾರು ಸದಸ್ಯರು ಪಡೆದುಕೊಂಡಿರುವುದು ಸಂತಸದ ವಿಚಾರ.

ಪ್ರತಿ ಬುಧವಾರ ಮತ್ತು ಶನಿವಾರ ಅಪರಾಹ್ನ 2.30ರಿಂದ 4.30ರ ವರೆಗೆ ರಾಜಾರಾಂ ಮೋಹನ ರಾಯ್ ರಸ್ತೆಯಲ್ಲಿರುವ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಚಾಂದನಿ ಹಾಲ್‌ನಲ್ಲಿ ವಧು-ವರಾನ್ವೇಷಣೆ ಕಾರ್ಯಕ್ರಮ ನಡೆಸಲಾಗುತ್ತಿದ್ದು ಬಳಗದ ಮತ್ತಷ್ಟು ಸದಸ್ಯರು ಈ ಕಾರ್ಯಕ್ರಮದ ಉಪಯೋಗವನ್ನು ಪಡೆಯಲು ಕೋರಲಾಗಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಶ್ರೀಮತಿ ವಿಜಯಲಕ್ಷ್ಮಿ ಭಟ್ (9844152107);**
**ಶ್ರೀಮತಿ ಗೀತಾ ಪಿ.ಆರ್. ರಾವ್ (9945938411) ; ಶ್ರೀಮತಿ ಸುಧಾ ಎಂ. ರಾವ್ (9901127738)**

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್




## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ, ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

---

ಶುಭಾಶಯಗಳನ್ನು ಕೋರುವವರು :



## ಉಡುಪಿ ಸ್ಟೋರ್ಸ್

ಗುಂಡೋಪಂತ ಬೀದಿ, ಮಾರ್ಕೆಟ್ ರಸ್ತೆ,
ಬೆಂಗಳೂರು - 560002

ಮನೆಗಳಿಗೆ, ದೇವಸ್ಥಾನಗಳಿಗೆ, ಹಾಗೂ
ಮಠಗಳಿಗೆ ಉಪಯುಕ್ತವಾದ ಪೂಜಾ ಸಾಮಗ್ರಿಗಳು,
ಉತ್ತಮ ದಾವಣಿ, ಮಗುಟ, ಮಡಿಪಂಚೆ,
ಗೋಪೀಚಂದನ, ಧಾರ್ಮಿಕ ಅಧ್ಯಾತ್ಮಿಕ ಪುಸ್ತಕಗಳು,
ಇಲ್ಲಿ ಸುಲಭ ದರದಲ್ಲಿ ದೊರೆಯುತ್ತದೆ.

ಸ್ಥಾಪಕರು : ಶ್ರೀ ಟಿ. ಆರ್. ಕೇಕುಡ

---

ಶುಭಾಶಯಗಳನ್ನು ಕೋರುವವರು :

## ಎಂ.ಜಿ.ಎಸ್‌ಕೆ. ವಧು ವರಾನ್ವೇಷಣಾ ಕೇಂದ್ರ

(ಅಖಿಲಾ ಕರ್ನಾಟಕ ಬ್ರಾಹ್ಮಣ ಸಭಾದ ಅಂಗ ಸಂಸ್ಥೆ)

ಈ ಸಂಸ್ಥೆಯು ಕಳೆದ ಹತ್ತು ವರ್ಷಗಳಲ್ಲಿ 100ಕ್ಕೂ ಹೆಚ್ಚು ವಧೂವರರ ಮುಖಾಮುಖಿ ಸಮಾವೇಶಗಳನ್ನು ವ್ಯವಸ್ಥೆಗೊಳಿಸಿ, ಸಾವಿರಕ್ಕೂ ಹೆಚ್ಚು ವಿವಾಹಗಳಿಗೆ ಕಾರಣೀಭೂತವಾಗಿದೆ. ವಿಧವೆಯರು, ಅಂಗವಿಕಲರು, ವಿಚ್ಛೇದಿತರು, ವಯೋಮಿತಿ ಮೀರಿದವರಿಗೆ ವಿಶೇಷ ಗಮನ ನೀಡಲಾಗುವುದು.

### ಕ್ಷೇಮ ಮಹಿಳಾ ವಸತಿ ನಿಲಯ

ದುಡಿಯುವ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸುಸಜ್ಜಿತವಾದ, ಸುಭದ್ರವಾದ ಸಸ್ಯಾಹಾರೀ ಊಟ ವಸತಿಗಳನ್ನು ಮಿತವ್ಯಯದಲ್ಲಿ ಒದಗಿಸಲಾಗುವುದು.

*ಹೆಚ್ಚಿನ ವಿವರಗಳಿಗೆ :* ಸುಮಂಗಲಾ ಎಸ್. ಆಚಾರ್
*ದೂರವಾಣಿ : 26791217, 26710797, 9844320328*

ಸೋಮೇಶ್ವರ 3799, 13ನೇ ಕ್ರಾಸ್, ಬನಶಂಕರಿ 2ನೇ ಹಂತ
(ಇಂದಿರಾ ನರ್ಸಿಂಗ್ ಹೋಂ ಬಸ್‌ಸ್ಟಾಪ್ ಹತ್ತಿರ) ಬೆಂಗಳೂರು - 70

---

ಶುಭಾಶಯಗಳೊಡನೆ,

## ಕೋಟೇಶ್ವರ ಸೂರ್ಯನಾರಾಯಣ ರಾವ್

ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**
ಅಧ್ಯಕ್ಷರು

ಉದ್ಯಮ :

## ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್ಸ್

21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು - 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ಸುದ್ದಿ ಸಂಗ್ರಹ

## ಶ್ರೀ ವಿದ್ಯಾಧೀಶ ತೀರ್ಥರ 133ನೇ ವರ್ಷದ ಆರಾಧನೆ

ಶ್ರೀ ವಿದ್ಯಾಧೀಶ ತೀರ್ಥರ 133ನೇ ವರ್ಷದ ಆರಾಧನಾ ಮಹೋತ್ಸವವು ಅವರ ಮೂಲ ವೃಂದಾವನ ಇರುವ ಬೆಂಗಳೂರಿನ ಗುಂಡೋಪಂತ ರಸ್ತೆಯ ಶ್ರೀ ಕೃಷ್ಣ ಮಂದಿರದಲ್ಲಿ ಶ್ರೀ ಕೃಷ್ಣಪ್ರಜ್ಞ ಪ್ರತಿಷ್ಠಾನದ ವತಿಯಿಂದ ವಿಜೃಂಭಣೆಯಿಂದ ದಿನಾಂಕ 24.6.2014 ರಂದು ಜರುಗಿತು.

ಪ್ರಾತಃಕಾಲದಲ್ಲಿ ದ್ವಾದಶಿ ಪ್ರಯುಕ್ತ ಶ್ರೀ ಕೃಷ್ಣ ಮುಖ್ಯಪ್ರಾಣ ಮತ್ತು ಅಲ್ಲಿನ ಗುರುಗಳ ವೃಂದಾವನ ಸನ್ನಿಧಿಯಲ್ಲಿ ಮಹಾಪೂಜೆ ನಡೆದು ಅನ್ನಸಂತರ್ಪಣೆ ನಡೆಯಿತು. ಸಾಯಂಕಾಲ 4.30ರಿಂದ ಸಂಗೀತ ವಿದೂಷಿ ಕುಮಾರಿ ರಂಜಿತಾ ಮತ್ತು ವೃಂದದವರಿಂದ ಭಕ್ತಿಸಂಗೀತ ಕಾರ್ಯಕ್ರಮವು ನಡೆಯಿತು. 6.30ರಿಂದ 7.30ರವರೆಗೆ ಡಾ॥ ವಿದ್ವಾನ್ ವಿ. ನಾಗಸಂಪಿಗೆ ಆಚಾರ್ಯರು ಶ್ರೀ ವಿದ್ಯಾದೀಶ ತೀರ್ಥರ ಸಂಸ್ಥಾನದ ಮೂಲ ಗುರುಗಳಾದ ವಿಶ್ವಗುರು ಶ್ರೀ ಮಧ್ವಾಚಾರ್ಯರ ಅಸದೃಶ ವ್ಯಕ್ತಿತ್ವದ ಕೆಲವು ವಿಶಿಷ್ಟ ಗುಣ, ವೈಭವಗಳ ವಿವರಗಳನ್ನು ನೆರೆದ ಭಕ್ತವೃಂದಕ್ಕೆ ಮನದಟ್ಟು ಮಾಡಿದರು.

ಶ್ರೀ ಮಧ್ವರು ತತ್ವವಿಚಾರದ ಸತ್ಯತೆಯನ್ನು ನಿರ್ಭಯವಾಗಿ ಶಾಸ್ತ್ರೀಯ ಪ್ರಮಾಣಗಳೊಂದಿಗೆ ಪ್ರತಿಪಾದಿಸಿ ಆಚರಿಸುವಲ್ಲಿ ನಿಖರವಾದ ಶ್ರದ್ಧೆ ಇರಿಸಿದ್ದರು. ಈ ನಿಟ್ಟಿನಲ್ಲಿ ಯಾವುದೇ ತರಹದ ವಿರೋಧ ಯಾರಿಂದ ಬಂದಲೂ ಅದಕ್ಕೆ ಶಾಸ್ತ್ರಾಧಾರಗಳೊಂದಿಗೆ ಸಮಾಧಾನ ನೀಡಿ ತತ್ತ್ವ ಸ್ಥಾಪನೆ ಮಾಡಿದರು ಮತ ಸಂತುಷ್ಟಿಗಾಗಿ ತಾತ್ತ್ವಿಕ ಸಿದ್ಧಾಂತಗಳ ಸಡಿಲಿಕೆಗಳನ್ನು ಒಪ್ಪಲಿಲ್ಲ.

ಉಡುಪಿಯ ಚರಿತ್ರೆಯಲ್ಲಿ ಶ್ರೀ ವಿದ್ಯಾಧೀಶರ ಸಾಧನೆ, ತಪಸ್ಸು, ಜ್ಞಾನ, ನೇರನುಡಿ, ವಿದ್ಯಾಪೋಷಣೆ, ಕಲೆಗಳಿಗೆ ಪ್ರೋತ್ಸಾಹ, ಉದಾರತೆ ಘನಸ್ತಿಕೆ ಮತ್ತಿತರ ಗುಣಗಳಿಂದ ಪೂರ್ಣವಾಗಿದ್ದ ಶ್ರೀ ಶ್ರೀಗಳವರ ಆಳ ಮತ್ತು ಎತ್ತರ ಇಂದಿನ ಕಾಲದ ಎಲ್ಲರಿಗೂ ಕಲ್ಪನೆಗೆ ಮೀರಿದ ವಿಷಯವಾಗಿದೆ ಎಂದು ಡಾ. ವಿ. ನಾಗಸಂಪಿಗೆಯವರು ತಿಳಿಸಿದರು. ಪ್ರವಚನದ ತರುವಾಯ ಶ್ರೀಕೃಷ್ಣನಿಗೆ ಹಾಗೂ ಪರಿವಾರ ದೇವತೆಗಳಿಗೆ, ಗುರುಗಳಿಗೆ ರಾತ್ರಿಪೂಜೆ, ರಂಗಪೂಜೆ, ಏಕಾಂತ ಸೇವೆ, ಸಂಗೀತ, ಭಜನೆಗಳು ನಡೆದುವು. ಫಲಾಹಾರ ವಿತರಣೆಯ ವ್ಯವಸ್ಥೆಯನ್ನು ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ವಿ. ರಾಮಕೃಷ್ಣ ಕೇಕುಡರೇ ಮುಂತಾದ ಗಣ್ಯರು ಭಾಗವಹಿಸಿ ನಿರ್ವಹಣೆಯನ್ನು ಭಂ. ಗುರುರಾಜಾಚಾರ್ಯರು ನಡೆಸಿಕೊಟ್ಟರು.

ಉಡುಪಿಯಲ್ಲೂ ಕೃಷ್ಣಪ್ರಜ್ಞ ಪ್ರತಿಷ್ಠಾನದ ವತಿಯಿಂದ ಆರಾಧನೋತ್ಸವವನ್ನು ನಡೆಸಲಾಯಿತು. ಕು. ಪ್ರಜ್ಞಾರವರಿಂದ ಭಕ್ತಿಸಂಗೀತ, ಡಾ॥ ಮಧುಸೂಧನ್ ಭಟ್‌ರವರಿಂದ ಆಚಾರ ವಿಚಾರಗಳ ಬಗ್ಗೆ ವಿಸ್ತೃತ ಭಾಷಣ ನಡೆಯಿತು. ಶ್ರೀ ಕೃಷ್ಣಾಪುರ ಮಠದ ಪ್ರಸಕ್ತ ಪೀಠಾಧಿಪತಿಗಳಾದ ಶ್ರೀ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಪಾದರು ತಮ್ಮ ಪಟ್ಟದ ದೇವರೊಂದಿಗೆ ಆಗಮಿಸಿ ಪೂಜೆ ನಡೆಸಿ ಭಕ್ತರಿಗೆ ಫಲಮಂತ್ರಾಕ್ಷತೆ ನೀಡಿದರು. ಉಪಾಹಾರ ದೊಂದಿಗೆ ಈ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ಅಡಿಗರಿಗೆ ಸಮಾಜ ಕಲಾಭೂಷಣ ಪ್ರಶಸ್ತಿ

ಕರ್ನಾಟಕ ಚಿತ್ರರಸಿಕರ ಸಂಘ(ರಿ) ಇವರು ದಿ. 28.6.2014ರಂದು ಭಾರತೀಯ ವಿದ್ಯಾ ಭವನದಲ್ಲಿ ಏರ್ಪಡಿಸಿದ್ದ



ಸಮಾರಂಭವೊಂದರಲ್ಲಿ ಶ್ರೀ ಕೆ.ಎನ್. ಅಡಿಗ ಅಡೂರುರವರು ಸಲ್ಲಿಸಿದ ಸಮಾಜ ಸೇವೆಗಾಗಿ ಅವರಿಗೆ ಸಮಾಜ ಕಲಾ ಭೂಷಣ ಪ್ರಶಸ್ತಿಯನ್ನು ನೀಡಿ, ಸನ್ಮಾನಿಸಲಾಯಿತು.

★ ಕುಂಬಾಪುರ ತಾಲೂಕು ಕೋಣಿ ಗ್ರಾಮದ ಶ್ರೀಮತಿ ಜಾಹ್ನವಿ ಮತ್ತು ಕೇಶವ ಅಡಿಗರವರ ಸುಪುತ್ರ ಚಿ॥ ರಾ॥ ಹರೀಶ ರವರ ವಿವಾಹ ಸಮಾರಂಭವು ಬಂಟ್ವಾಳ ತಾಲೂಕು ಅಜ್ಜಿಬೆಟ್ಟು ಗ್ರಾಮದ ವಾಂಬೆಟ್ಟು ಶ್ರೀಮತಿ ಪ್ರಭಾವತಿ ಮತ್ತು ಶ್ರೀ ಭವಾನಿ ಶಂಕರ ಹೊಳ್ಳರವರ ಸುಪುತ್ರಿ ಚಿ.ಸೌ. ಆಶಾರವರೊಂದಿಗೆ ದಿನಾಂಕ 8.6.2014 ರವಿವಾರ ಮಂಗಳೂರು ಗೋಕುಲ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ಜರುಗಿತು.

★ ಬಳಗದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಪೋಷಕರಲ್ಲಿ ಒಬ್ಬರಾದ ಶ್ರೀ ಪಿ.ಸಿ. ರಾವ್‌ರವರು ಅರವತ್ತು ವಸಂತಗಳನ್ನು ಪೂರೈಸಿದ ಸಂದರ್ಭದಲ್ಲಿ ಷಷ್ಠ್ಯಬ್ದಿ ಪೂರ್ತಿ ಸಮಾರಂಭವನ್ನು ದಿನಾಂಕ 01-06-2014ರಂದು ಏರ್ಪಡಿಸ ಲಾಗಿತ್ತು. ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ಅದ್ದೂರಿಯಾಗಿ ನಡೆದ ಈ ಶುಭ ಸಮಾರಂಭದಲ್ಲಿ ಶ್ರೀ ರಾವ್‌ರವರ ನೂರಾರು ಹಿತೈಷಿಗಳು ಭಾಗವಹಿಸಿ, ಶುಭಕೋರಿದ್ದಾರೆ.

★ ಬಳಗದ ಸಕ್ರಿಯ ಸದಸ್ಯ ದಂಪತಿಗಳಾದ ಶ್ರೀ ಪಿ.ವಿ. ದಿವಾಕರರಾವ್ ಮತ್ತು ಶ್ರೀಮತಿ ಕೆ.ಬಿ. ಪ್ರೇಮಲತಾ ರಾವ್‌ರವರ ಸುಪುತ್ರಿ ಸೌ॥ ಲಕ್ಷ್ಮೀ ಡಿ. ರಾವ್ ಅವಳ ಶುಭ ವಿವಾಹವು

ಶ್ರೀಮತಿ ಸುಶೀಲಾ ಮತ್ತು ಶ್ರೀ ಶ್ರೀನಿವಾಸ ಭಟ್ ದಂಪತಿಗಳ ಮಗ ಚಿ|| ಎಸ್. ಗುರುರಾಜ ಭಟ್ ಅವರೊಂದಿಗೆ ದಿ. 28-5-2014ರಂದು ಜೆ.ಪಿ. ನಗರದ ಮಾರೇಹಳ್ಳಿ ಕಲಾಭವನದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ನಾಡಿನ ಗಣ್ಯರೂ ಸೇರಿದಂತೆ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ನೂತನ ದಂಪತಿಗಳಿಗೆ ಶುಭವನ್ನು ಕೋರಿದ್ದಾರೆ.

★ ಬಳಗದ ಕ್ರಿಯಾಶೀಲ ಸದಸ್ಯ ದಂಪತಿಗಳಾದ ಶ್ರೀಮತಿ ಸುಮಂಗಲಾ ಆಚಾರ್ಯ ಮತ್ತು ಶ್ರೀ ಕೆ. ಸದಾಶಿವ ಆಚಾರ್ಯರವರ ಸುಪುತ್ರಿ ಸೌ|| ಸೌಜನ್ಯ ಇವಳ ಮದುವೆ ದಿನಾಂಕ 8.6.2014ರಂದು ಹನುಮಂತ ನಗರದ ನಿಜಗುಣ ಕಲ್ಯಾಣ ಮಂಟಪದಲ್ಲಿ ಶ್ರೀಮತಿ ಬಿ.ಎಂ. ಶ್ಯಾಮಲ ಮತ್ತು ಶ್ರೀ ಬಿ.ಕೆ. ಮುರುಳಿ ದಂಪತಿಗಳ ಪುತ್ರ ಚಿ|| ಬಿ.ಎಂ. ಭರತ್ ಜೊತೆ ಅದ್ದೂರಿಯಿಂದ ನೆರವೇರಿದೆ.

★ ಬಳಗದ ಸಕ್ರಿಯ ಸದಸ್ಯ ದಂಪತಿಗಳಾದ ಶ್ರೀ ರಾಘವೇಂದ್ರ ರಾವ್ ಮತ್ತು ಶ್ರೀಮತಿ ರಶ್ಮಿ ದಂಪತಿಗಳ ಜ್ಯೇಷ್ಠ ಪುತ್ರ ಹಾಗೂ ಶ್ರೀಮತಿ ವಸಂತಿ ಮತ್ತು ಶ್ರೀ ಪಿ.ಎನ್. ಶ್ರೀನಿವಾಸರಾವ್‌ರವರ ಮೊಮ್ಮಗ ಚಿ|| ಸಾತ್ವಿಕ್ ರಾವ್‌ನ ಬ್ರಹ್ಮೋಪದೇಶ ಸಮಾರಂಭವು ದಿ. 24.4.2014ರಂದು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ವಿದ್ಯುಕ್ತವಾಗಿ ನಡೆದಿದೆ.

★ ಬಳಗದ ಹಿರಿಯ ಸದಸ್ಯರಾದ ಶ್ರೀ ಬಿ.ಆರ್. ನರಸಿಂಹರಾವ್ ಮತ್ತು ಶ್ರೀಮತಿ ಸಾವಿತ್ರಿಯವರ ಮೊಮ್ಮಗ ಹಾಗೂ ಶ್ರೀಮತಿ ಸುಮಾ ಮತ್ತು ಶ್ರೀ ಕೆ. ರಘುರಾಮ್ ದಾಸ್‌ರವರ ಸುಪುತ್ರ ಚಿ|| ಕೆ. ಜಯರಾಮ್ ದಾಸ್ ಬ್ರಹ್ಮೋಪದೇಶ ಸಮಾರಂಭವು ದಿ. 23.4.2014ರಂದು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ ವಿಜೃಂಭಣೆಯಿಂದ ನೆರವೇರಿದೆ.

★ ಬಳಗದ ಸದಸ್ಯರು ಹಾಗೂ ಜನಪ್ರಿಯ ಲೇಖಕರಾದ ಶ್ರೀ ಹಂದಾಡಿ ಸತ್ಯನಾರಾಯಣ ರಾವ್ ಮತ್ತು ಶ್ರೀಮತಿ ಕೃಷ್ಣವೇಣಿಯವರ ಪುತ್ರ ಚಿ|| ಹೆಚ್. ಸೂರ್ಯಪ್ರಕಾಶ್ ರಾವ್ ಇವರ ಮದುವೆ ಶ್ರೀಮತಿ ಮತ್ತು ಶ್ರೀ ವಿ. ವೆಂಕಟರಮಣ ಹೊಳ್ಳರವರ ಪುತ್ರಿ ಸೌ|| ವಿ. ಶೃತಿ ದೇವಿ ಎಂಬ ವಧುವಿನೊಂದಿಗೆ ದಿ. 1.5.2014ರಂದು ಕುಂದಾಪುರದ ಶ್ರೀ ಅನಂತ ಪದ್ಮನಾಭ ಸಭಾಗೃಹದಲ್ಲಿ ಅದ್ದೂರಿಯಿಂದ ನಡೆದಿದೆ.

★ ಬಳಗದ ಸದಸ್ಯರಾದ ಶ್ರೀ ಎ.ಆರ್. ಸತ್ಯನಾರಾಯಣ ಮತ್ತು ಶ್ರೀಮತಿ ಉದಯ ಇವರ ಸುಪುತ್ರ ಡಾ|| ಪುನೀತ್‌ರವರ ಮದುವೆ ದಿನಾಂಕ 2.5.2014ರಂದು ಮೈಸೂರಿನ ಸಾಮ್ರಾಟ್ ಕಲಾಭವನದಲ್ಲಿ ಶ್ರೀಮತಿ ವಿನೋದ ಮತ್ತು ಶ್ರೀ ಹೆಚ್.ಎನ್. ರಾಜಾರಾಂ ದಂಪತಿಗಳ ಮಗಳು ಡಾ|| ಪೂಜಾ ಇವರೊಂದಿಗೆ ಅದ್ದೂರಿಯಾಗಿ ನೆರವೇರಿದೆ.

## ರಂಗ ವಿಠಲ ಪ್ರಶಸ್ತಿ



ಇತ್ತೀಚೆಗೆ ರಂಗವಿಠಲ ಮಾಸ ಪತ್ರಿಕೆ ಹಾಗೂ ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಗಳ ದಶಮಾನೋತ್ಸವ ಪ್ರಶಸ್ತಿಯನ್ನು ಹಲವು ಲೇಖಕರಿಗೆ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಆನಂದ ಬಳಗದ ಸದಸ್ಯರಾದ ಲೇಖಕಿ ಶ್ರೀಮತಿ ಜಾಹ್ನವಿ ಆಚಾರ್ಯರವರಿಗೆ ರಂಗವಿಠಲ ಪ್ರಶಸ್ತಿ ಫಲಕ ನೀಡಿ ಸನ್ಮಾನಿಸಲಾಯಿತು.

## ಬಳಗದ ವಾರ್ಷಿಕ ಮಹಾಸಭೆ

ಆನಂದ ಬಳಗದ 27ನೇ ವಾರ್ಷಿಕ ಸರ್ವ ಸದಸ್ಯರ ಮಹಾ ಸಭೆಯು ದಿನಾಂಕ 21.9.2014ನೇ ಭಾನುವಾರ ಪೂರ್ವಾಹ್ನ 10.30 ಘಂಟೆಗೆ ಹೋಟೆಲ್ ಅಜಂತಾ , ಮಹಾತ್ಮಾಗಾಂಧಿ ರಸ್ತೆ , ಬೆಂಗಳೂರು - 560001 ಇಲ್ಲಿ ನಡೆಯಲಿದೆ. ಮಹಾಸಭೆಯ ಸೂಚನಾ ಪತ್ರ, ಪರಿಶೋಧಿತ ವಾರ್ಷಿಕ ಲೆಕ್ಕಪತ್ರ ಹಾಗೂ ವಾರ್ಷಿಕ ವರದಿಯನ್ನು ಸದಸ್ಯರಿಗೆ ಇ-ಮೇಲ್ ಮೂಲಕ ಕಳುಹಿಸ ಲಾಗುವುದು. ಹೊಸದಾಗಿ ಇ-ಮೇಲ್ ವಿಳಾಸವನ್ನು ನೀಡಬಯಸುವವರು ಅಥವಾ ಇ-ಮೇಲ್ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ, ಸದಸ್ಯರು ಈ ಕೆಳಗಿನ ಇ-ಮೇಲ್‌ಗೆ ವಿವರಗಳನ್ನು ದಿನಾಂಕ 15.8.2014ರ ಒಳಗಾಗಿ ನೀಡಲು ಕೋರಲಾಗಿದೆ.

yrk1093@gmail.com, (Y. Radhakrishna, Secretary, 9844058851)
info@gspowersystems.com, (M.K.Gurumurthy, Treasurer, 9844022692)

ಆಡಳಿತಾತ್ಮಕ ವೆಚ್ಚವನ್ನು ಕಡಿತಗೊಳಿಸುವ ದೃಷ್ಟಿಯಿಂದ ವಾರ್ಷಿಕ ಮಹಾಸಭೆಗೆ ಇ-ಮೇಲ್ ಮುಖಾಂತರ ಹೊರತಾಗಿ ಪ್ರತ್ಯೇಕವಾದ ನೋಟೀಸ್ ಕಳುಹಿಸಲಾಗುವುದಿಲ್ಲ. ಎಲ್ಲಾ ಸದಸ್ಯರು ಮಹಾ ಸಭೆಗೆ ಆಗಮಿಸಿ ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿ ಕೋರಲಾಗಿದೆ.

**- ಕಾರ್ಯದರ್ಶಿ, ಆನಂದಬಳಗ**

Bhruguvani (April - June 2014) Regd. with RNI under No.KARKAN/2012/45587 No. of pages : 32 (28+4)





turrinoad.com

Indulge in the celebration of unique designs with an exclusive collection of specially crafted jewellery in gold and precious embellishments from Bhima. Get on and pass the charm.

BHIMA GOLD TREE

To know more about the gold savings scheme, kindly contact our showrooms.

BHIMA JEWELLERS
GOLD • DIAMONDS • SILVER • PLATINUM
BENGALURU • UDUPI • HASSAN

**BENGALURU:** DICKENSON ROAD. T: 080 2558 7711, JAYANAGAR. T: 080 4130 1761, KORAMANGALA. T: 080 2553 7762, RAJAJINAGAR. T: 080 2352 7711 HBR LAYOUT. T: 080 2544 7711, PHOENIX MARKETCITY. T: 080 6726 6618 • **UDUPI:** T: 0820 259 3112 • **HASSAN:** T: 08172 251711


If undelivered please return to:
**Ananda Balaga**
Jeevana Buildings, 2nd Floor
11, Kumara Park East, Bangalore - 560 001

Published by Sri P.S. Bagilthaya, President, Ananda Balaga, Bangalore - 560 001 Printed by Omkar Offset Printers, Bangalore - 02